ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 11 ಮಾರ್ಚಿ 14, 1982 ಬೆಲೆ 60 ಪೈಸೆ

ಮೈಕೋ ಕಾರ್ಮಿಕರಿಗೆ ಭಾರೀ ಜಯ

ಬೆಂಗಳೂರಿನ ಮೈಕೋ ಆಡಳಿತವರ್ಗ ಕಳೆದ ವರ್ಷ ಮೈಕೋ ಕಾರ್ಮಿಕ ಸಂಘದ 40 ಜನ ಸಕ್ರೀಯ ಕಾರ್ಯಕರ್ತರನ್ನು ಯಾವ ವಿಚಾರಣೆ ಇಲ್ಲದೇ ವಜಾ ಮಾಡಿತ್ತು. ಅಡಿಷನಲ್ ಇಂಡಸ್ಟ್ರಿಯಲ್ ಟ್ರಿಬ್ಯೂನಲ್ ಮುಂದೆ ಅನುಮತಿಗೆ ಅರ್ಜಿಸಲ್ಲಿಸಿತ್ತು.

ಸೆ. 33 (2) (B) IDA ಮೇರೆಗೆ ಅನುಮತಿ ಕೊಡಬಾರದೆಂದು ಅರ್ಜಿ ತಿರಸ್ಕರಿಸಬೇಕೆಂದೂ ಸಂಘದ ಪ್ರತಿನಿಧಿ ಕಾಂ| ಸೂರ್ಯನಾರಾಯಣ ರಾವ್ ವಾದಿಸಿದರು.

ಆದರೆ ಟ್ರಿಬ್ಯೂನಲ್ ಪ್ರೀಸಿಡಿಂಗ್ ಆಫೀಸರ್ ಅವರು ಸುಪ್ರೀಂ ಕೋರ್ಟ್ ತೀರ್ಮಾನದ ಪ್ರಕಾರ ಮ್ಯಾನೇಜಮೆಂಟಿಗೆ ಟ್ರಿಬ್ಯೂನಲ್ ಮುಂದೆ ಸಾಕ್ಷಿ ನೀಡಲು ಅವಕಾಶವಿದೆ ಎಂದು, ಪೂರ್ಣ ವಿಚಾರಣೆ ಟ್ರಿಬ್ಯೂನಲ್ ಮುಂದೆ ನಡೆಯುವುದೆಂದು ಅರ್ಜಿ ತಳ್ಳಿಹಾಕಿದರು.

ವಿಚಾರಣೆ ಟ್ರಿಬ್ಯೂನಲ್ ಮುಂದೆ ನಡೆಯಬೇಕಾಗಿರುವಾಗ ತೀರ್ಮಾನವಾಗುವ ವರೆಗೆ ಕಂಪನಿ ಒಪ್ಪಂದದ ಪ್ರಕಾರ ಸಬ್‌ಸಿಸ್ಟನ್ಸ್ ಅಲವನ್ಸ್ ಕೊಡಬೇಕೆಂದು ಅರ್ಜಿ ಹಾಕಲಾಯಿತು. ವಾದ-ವಿವಾದದ ನಂತರ ಟ್ರಿಬ್ಯೂನಲ್ ಒಪ್ಪಂದದ ಪ್ರಕಾರ ಅಂದರೆ ಮೊದಲು 3 ತಿಂಗಳು ಶೇ 50, ನಂತರ ಸಂಬಳದ ಶೇ 75 ರಷ್ಟು ಸಂಬಳ ಕೊಡಬೇಕೆಂದು ತೀರ್ಪಿತ್ತಿತು.

ಈ ತೀರ್ಪಿನ ವಿರುದ್ಧ ಆಡಳಿತವರ್ಗ ಹೈ ಕೋರ್ಟಿಗೆ ರಿಟ್ ಅರ್ಜಿ ಸಲ್ಲಿಸಿ I. D Act 33 (2) (B) ಪ್ರಕಾರ ಪರಿಹಾರ ಕೊಡಿಸಲು ಟ್ರಿಬ್ಯೂನಲ್‌ಗೆ ಅಧಿಕಾರವಿಲ್ಲವೆಂದು ಹೇಳಿ ತಾತ್ಕಾಲಿಕ ತಡೆ ಆಜ್ಞೆ ಪಡೆಯಿತು.

ವಿಚಾರಣೆಗೆ ವಿವಾದವನ್ನು ತೆಗೆದುಕೊಂಡಾಗ ನ್ಯಾಯಮೂರ್ತಿ ಬೋಪಣ್ಣನವರು, ಆಡಳಿತವರ್ಗ ಸ್ಟ್ಯಾಂಡಿಂಗ್ ಆರ್ಡರ್ ವಿರುದ್ಧವಾಗಿ ನಡೆದುಕೊಂಡು ವಿಚಾರಣೆ ಇಲ್ಲದೇ ವಜಾ ಮಾಡಿರುವುದರಿಂದ ಟ್ರಿಬ್ಯೂನಲ್‌ಗೆ ಪರಿಹಾರ ಕೊಡಿಸುವ ಅಧಿಕಾರವಿದೆ ಎಂದು ಅಭಿಪ್ರಾಯ ಪಟ್ಟರು.

ಮೈಕೋ ಮ್ಯಾನೇಜ್‌ಮೆಂಟಿನವರು ಸೋತು ಹೋಗುತ್ತೇವೆಂಬ ಭಯದಿಂದ ತಾವು ವಜಾ ಆದ ಪ್ರತಿ ಕಾರ್ಮಿಕನಿಗೂ ಜನವರಿ 1, 1982 ರಿಂದ 500 ರೂ. ಮಾಹೆಯಾನ ಕೊಡುತ್ತೇವೆಂಬ ವಿಚಾರವನ್ನು ಹೇಳಿ, ನ್ಯಾಯಾಲಯ ಅರ್ಜಿ ವಿಚಾರದಲ್ಲಿ ತೀರ್ಮಾನ ಕೊಡಬೇಕಿಲ್ಲವೆಂದು ಹೇಳಿದರು.

ಕಾರಣ ನ್ಯಾಯಾಲಯ ಟ್ರಿಬ್ಯೂನಲ್ ತೀರ್ಮಾನದ ಬಗ್ಗೆ ತೀರ್ಪು ಕೊಡದೇ ಜನವರಿ 1, 1982 ರಿಂದ ವಜಾ ಆದ ಪ್ರತಿ ಕಾರ್ಮಿಕನಿಗೆ ಮಾಹೆಯಾನ 500 ರೂ ಒಂದು ವರ್ಷದವರೆಗೆ ಕೊಡಬೇಕೆಂದೂ, ಅಷ್ಟರಲ್ಲಿ ವಿವಾದ ತೀರ್ಮಾನವಾಗದಿದ್ದರೆ ಪರಿಹಾರಕ್ಕೆ ಅರ್ಜಿ ಹಾಕಬೇಕೆಂದು ತೀರ್ಪಿತ್ತರು.

ಬಹುಷಃ ರಾಜ್ಯದಲ್ಲಷ್ಟೇ ಅಲ್ಲ, ದೇಶದಲ್ಲೇ 33 (2) (B) ಅರ್ಜಿ ವಿಚಾರಣೆ ಕಾಲದಲ್ಲಿ ಪರಿಹಾರ ದೊರೆಕಿರುವುದು ಪ್ರಪ್ರಥಮ. ಇದು ಕಾರ್ಮಿಕರಿಗೆ ದೊರೆತ ದೊಡ್ಡ ಜಯ.

ರೈತರ ಹೋರಾಟ ಇಡೀ ಪ್ರಜಾಪ್ರಭುತ್ವ ಹೋರಾಟದ ಅವಿಭಾಜ್ಯ ಅಂಗ

—ಇ. ಎಂ. ಎಸ್.

"ರೈತರ ಹೋರಾಟ ಇಡೀ ಪ್ರಜಾಪ್ರಭುತ್ವ ಹೋರಾಟದ ಒಂದು ಅವಿಭಾಜ್ಯ ಅಂಗವಾಗಿದೆ. ಪ್ರಸ್ತುತ ಸರ್ವತೋಮುಖವಾಗಿ ಅಧಃಪತನಗೊಂಡಿರುವ ಆರ್ಥಿಕ-ಸಾಮಾಜಿಕ ಪರಿಸ್ಥಿತಿಯ ವಿರುದ್ಧ ಇನ್ನಿತರ ಎಲ್ಲ ಪ್ರಜಾಸತ್ತಾತ್ಮಕ ಶಕ್ತಿಗಳೊಂದಿಗೆ ರೈತರು ಹೋರಾಡಬೇಕೆಂದು" ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಪ್ರಧಾನ ಕಾರ್ಯದರ್ಶಿಯವರಾದ ಕಾಂ| ಇ. ಎಂ.ಎಸ್. ನಂಬೂದಿರಿಪಾಡ ಅವರು ಮಾ. 11 ರಂದು ಕೋಲಾರ ಜಿಲ್ಲೆಯ ಮುಳಬಾಗಲಿನಲ್ಲಿ, ಕರ್ನಾಟಕ ಪ್ರಾಂತ ರೈತ ಸಂಘದ 7ನೇ ಸಮ್ಮೇಳನವನ್ನು ಉದ್ಘಾಟನೆ ಮಾಡುತ್ತ ಕರೆಕೊಟ್ಟರು.

ಕರ್ನಾಟಕದಲ್ಲಿ ರೈತ ಸಂಘದವರು ಈ ಕೆಲಸವನ್ನು ದೊಡ್ಡ ರೀತಿಯಲ್ಲಿ ನಡೆಸಿದ್ದಾರೆಂದು ಹೇಳಿ, ರೈತರು-ಕಾರ್ಮಿಕರು ಸಂಯುಕ್ತ ಕಾರ್ಯಾಚರಣೆಗಿಳಿದಿರುವುದನ್ನು ಶ್ಲಾಘಿಸಿದರು.

ತಾವು ಕಿಸಾನ ಸಭಾದ ಸಂಸ್ಥಾಪಕ ಸದಸ್ಯನಾಗಿದ್ದುದನ್ನು ನೆನಪು ಮಾಡಿದ ಕಾಂ| ಇ.ಎಂ.ಎಸ್. ಅವರು ಸ್ವಾತಂತ್ರ್ಯ ಪೂರ್ವದಲ್ಲಿ ಎರಡು ಮುಖ್ಯ ಉದ್ದೇಶಗಳಿಗಾಗಿ ಕಿಸಾನ ಸಭಾ ಹೋರಾಡಲು ಮುಂದಾಗಿತ್ತೆಂದು ರೈತ ಹೋರಾಟದ ಇತಿಹಾಸ ವಿವರಿಸಿದರು. ಅನಿಷ್ಟ, ಕ್ರೂರ ಜಮೀನ್ದಾರಿ, ಜಾಗಿರದಾರಿ ಸಂಸ್ಥಾನಿಕರ ವಿರುದ್ಧ ರೈತರ ಹೋರಾಟವಾಗಿ ಭೂಮಾಲಿಕ ಪದ್ಧತಿ ಸಂಪೂರ್ಣವಾಗಿ ನಾಶಗೊಳಿಸಲು ಹೋರಾಡಬೇಕೆನ್ನುವುದೊಂದಾರೆ, ಬ್ರಿಟಿಷ್ ಸಾಮ್ರಾಜ್ಯ ಶಾಹಿಗಳ ಕಪಿಮುಷ್ಟಿಯಿಂದ ಶೋಷಣೆ ಹೊಂದುವುದನ್ನು ತಪ್ಪಿಸಲೆಂದು ಭಾರತಕ್ಕೆ ಸ್ವಾತಂತ್ರ್ಯ ಸಿಗಬೇಕೆನ್ನುವುದು ಮತ್ತೊಂದು ಎಂದು ಹೇಳಿದರು.

ಇಂದು ಸ್ವಾತಂತ್ರ್ಯ ಸಿಕ್ಕಿದೆ; ಆಗಿನ ಕಾಲದ ಜಮೀನ್ದಾರಿ ಸಂಬಂಧಗಳು ಈಗ ಬದಲಾಗಿವೆ ಎಂದ ಅವರು; ಇಷ್ಟಾಗಬೇಕಾದರೂ ಕಿಸಾನ ಸಭಾದ ಹೋರಾಟದ ಪ್ರತಿಫಲವೇ ಆಗಿದೆ ಎಂದು ಹೆಮ್ಮೆಪಟ್ಟುಕೊಂಡರು.

ಸ್ವಾತಂತ್ರ್ಯ ಸಿಕ್ಕಿ 34 ವರ್ಷಗಳಾದರೂ ಸಾಮಾಜಿಕ-ಆರ್ಥಿಕ-ರಾಜಕೀಯ ಪರಿಸ್ಥಿತಿ ಅಧೋಗತಿಗಿಳಿದಿದೆ ಎಂದೂ, ಅಂದಿನ ಕಾಂಗ್ರೆಸ್ಸಿನಲ್ಲಿ ಸ್ವಲ್ಪವಾದರೂ ಆದರ್ಶವಿತ್ತು, ಆದರೆ ಇಂದಿನ ಕಾಂಗ್ರೆಸ್ಸಿನಲ್ಲಿ ಡಕಾಯಿತರ, ಕೊಲೆಗಡುಕರ, ಅನೈತಿಕ ಜನರ ತಂಡವಾಗಿದೆಯೆಂದೂ ಹೇಳಿ, ಅಂತುಳೆ-ಚಭಿರಾಮ್, ಎ. ಬಿ. ಸಿಂಗ್ ಅವರನ್ನು ಉದಾಹರಿಸಿದರು. "ಸತ್ಯಮೇವಜಯತೆ" ಬದಲು "ಹಣ ಮೇವ ಜಯತೇ", ಆಗಿದೆಯೆಂದರು.

ಸ್ವಾತಂತ್ರ್ಯಕ್ಕಾಗಿ, ಒಳ್ಳೆಯ ಜೀವನ ಪರಿಸ್ಥಿತಿಗಾಗಿ ಹೋರಾಡಿದ ನಾವು ಈಗ ದೇಶದಲ್ಲಿ ತೀರ ಹದಗೆಟ್ಟದ ಪರಿಸ್ಥಿತಿಗೆ

(8 ನೆಯ ಪುಟವನ್ನು ನೋಡಿ).

ಕಡೆಗಣಿಸಲ್ಪಟ್ಟ ಕರ್ನಾಟಕ

ಕರ್ನಾಟಕ, ಆಂಧ್ರ, ಮಹಾರಾಷ್ಟ್ರಗಳು ಇಂದಿರಾ ಗಾಂಧಿ ಪಕ್ಷದ "ದತ್ತ ಮಕ್ಕಳು" ಎಂಬ ಪ್ರತೀತಿ ಗಳಿಸಿವೆ. ಯಾಕೆಂದರೆ ದೇಶದ ಬೇರೆ ರಾಜ್ಯಗಳಲ್ಲಿ ಕೆಲವು ವರ್ಷಗಳವುಟ್ಟಿಗಾದರೂ ವಿರೋಧ ಪಕ್ಷಗಳು ಅಧಿಕಾರ ಗದ್ದುಗೆಯನ್ನೇರಿದ್ದರೆ, ಈ ಮೂರು ರಾಜ್ಯಗಳಲ್ಲಿ ಕಾಂಗ್ರೈ ಪಕ್ಷ ಭದ್ರವಾಗಿ ಒಂದೇ ಸಮನೆ ಆಡಳಿತ ನಡೆಸುತ್ತ ಬಂದಿದೆ. ಕರ್ನಾಟಕ, ಮಹಾರಾಷ್ಟ್ರಗಳಲ್ಲಿ ದೇವರಾಜ ಅರಸ್ ಮತ್ತು ಶರದ್ ಪವಾರ ಅವರಿಬ್ಬರೂ ವಿರೋಧ ಪಕ್ಷವಾಗಿ ಕೆಲವು ತಿಂಗಳು ಆಡಳಿತ ನಡೆಸಿದರೂ ಕೂಡ ಈ ಮೂರು ರಾಜ್ಯಗಳೂ ಇಂದಿರಾ ಕಾಂಗ್ರೆಸ್ಸಿನ ಭದ್ರ ಕೋಟೆಗಳೆಂಬ ಪ್ರತೀತಿ.

ಈ ರೀತಿ ಕೇಂದ್ರ-ರಾಜ್ಯಗಳಲ್ಲಿ ಒಂದೇ ಪಾರ್ಟಿ ಕಳೆದ 35 ವರ್ಷಗಳಿಂದಲೂ ಅಖಂಡವಾಗಿ ಆಡಳಿತ ನಡೆಸುತ್ತಿರುವಾಗ ಕೈಗಾರಿಕೆ, ಸಾರಿಗೆ, ನೀರಾವರಿ

ವಿದ್ಯುಚ್ಛಕ್ತಿ, ಇತರ ಬೆಳವಣಿಗೆಗಳ ಕುರಿತು ಕೇಂದ್ರ ಸರ್ಕಾರ ಕರ್ನಾಟಕ ರಾಜ್ಯಕ್ಕೆ ಹೆಚ್ಚಿನ ಗಮನ ಕೊಡಬೇಕಾಗಿತ್ತು. ಆದರೆ ಕರ್ನಾಟಕ ಜನತೆಯ ಮತಗಳು ತನ್ನ "ವ್ಯಾನಿಟೀ ಬ್ಯಾಗಿ" ನಲ್ಲಿ ಭದ್ರವಾಗಿದೆಂದು ಇಂದಿರಾ ಗಾಂಧಿಗೆ ಮನವರಿಕೆಯಾಗಿರುವಾಗ ಬೆಳವಣಿಗೆ ಕಾರ್ಯಕ್ರಮಗಳತ್ತ ಗಮನ ಹರಿಸುವ ಅವಶ್ಯಕತೆಯಾದರೂ ಏನಿದೆ. ಆ ಕಾರಣದಿಂದಲೇ ಈ ವರ್ಷ ಕೇಂದ್ರದ ಅಂದಾಜು ಪತ್ರಿಕೆಯಲ್ಲಿ ಕರ್ನಾಟಕವನ್ನು ಸಂಪೂರ್ಣ ಕಡೆಗಣಿಸಲಾಗಿದೆ.

ರೇಲ್ವೆಮಾರ್ಗ

ಬೆಂಗಳೂರು—ಗುಂತಕಲ್ ಬ್ರಾಡ್ ಗೇಜ್ ಮಾರ್ಗ ಇನ್ನು ಆರು ತಿಂಗಳಲ್ಲಿ ಪೂರ್ಣಗೊಳ್ಳುತ್ತದೆಂದು ಗುಂತಕಲ್ ವಿಭಾಗದ ರೇಲ್ವೆ ಮ್ಯಾನೇಜರ್ (ವರ್ಕ್ಸ್) ಗೋಪಾಲಕೃಷ್ಣನ್ ಫೆಬ್ರವರಿ 24 ರಂದು ತಿಳಿಸಿದ್ದರು.

ಬೆಂಗಳೂರು-ಗುಂತಕಲ್ ಬ್ರಾಡ್ ಗೇಜ್ ಮಾರ್ಗದಲ್ಲಿ ಕೆಲಸ ಮಾಡುತ್ತಿರುವ 700 ಕೆಲಸಗಾರರನ್ನು ಬೇರೆಡೆ ಸಾಗಿಸುವ ಕೆಲಸ ನಡೆದಿದೆಯೆಂದೂ, ಈ ಕಾರ್ಯಕ್ಕಾಗಿಯೇ ರಚಿಸಲ್ಪಟ್ಟ ಸಬ್-ಡಿವಿಜನ್‌ಗಳನ್ನು ಮುಚ್ಚಲಾಗುತ್ತಿದೆ ಎಂಬ ಸುದ್ದಿ ಮಾರ್ಚಿ 6 ರಂದು ಪ್ರಕಟವಾಗಿದೆ.

ಮೀರಜ್—ಬೆಂಗಳೂರು, ಲೋಂಡಾ—ಗುಂತಕಲ್, ಶೋಲಾಪುರ-ಗದಗ, ಗುಂತಕಲ್-ಬೆಂಗಳೂರು, ಬೆಂಗಳೂರು-ಮೈಸೂರು ರೇಲ್ವೆ ದಾರಿಗಳು ಬ್ರಾಡ್ ಗೇಜಾಗಿ ಹಲವಾರು ವರ್ಷಗಳ ಹಿಂದೆಯೇ ಪರಿವರ್ತನೆಯಾಗಬೇಕಾಗಿತ್ತು. ಹುಬ್ಬಳ್ಳಿ-ಕಾರವಾರ ಹೊಸ ರೇಲ್ವೆ ಆಗಬೇಕಾಗಿತ್ತು. ಆದರೆ ಹೊಸ ವರ್ಷದ ಬಜೆಟ್ಟಿನಲ್ಲಿ ರೇಲ್ವೆ ಅಭಿವೃದ್ಧಿ, ಬ್ರಾಡ್‌ಗೇಜ್ ಪರಿವರ್ತನೆ, ಹೊಸ

ಎನ್. ಕೆ. ಉಪಾಧ್ಯಾಯ

ರೇಲ್ವೆಗಳಿಗಾಗಿ ಒಂದು ನಯಾ ಪೈಸೆ ಮೀಸಲಾಗಿಟ್ಟಿಲ್ಲ. ಅಷ್ಟೇ ಅಲ್ಲ. ಗುಂತಕಲ್-ಬೆಂಗಳೂರ್ ಬ್ರಾಡ್ ಗೇಜ್ ಕೆಲಸವನ್ನು ಕೈಬಿಡಲಾಗಿದೆಂಬ ಸುದ್ದಿ ಕರ್ನಾಟಕದ ಜನತೆಗೇನೇ ಮಾಡಿದ ಅನ್ಯಾಯವಲ್ಲದೆ ಮತ್ತೇನಲ್ಲ. ಕೇಂದ್ರದಲ್ಲಿ ರಾಜ್ಯ ರೇಲ್ವೆ ಮಂತ್ರಿಯಾಗಿರುವ ಕರ್ನಾಟಕದ ಪ್ರತಿನಿಧಿ ಜಾಫರ ಶರೀಫರು ಇಂದಿರಾ ಗಾಂಧಿಯ ಅತಿ ಸಮೀಪದವರಾಗಿದ್ದರೂ ಕೂಡ ಕರ್ನಾಟಕ-ದಿಲ್ಲಿಯಿಂದ ಬಲು ದೂರವಲ್ಲವೇ ? ರೇಲ್ವೆ ಅಭಿವೃದ್ಧಿಯಾಗದಿದ್ದರೂ ಓಟು ಅಭಿವೃದ್ಧಿಯಾಗಿಯೇ ತೀರುತ್ತದೆಂಬ ಧೈರ್ಯದ ಘೋಷಣೆಯನ್ನು ಮುಖ್ಯಮಂತ್ರಿ ಗುಂಡೂರಾಯರು ದಿಲ್ಲಿಯಿಂದಲೇ ಘೋಷಿಸಿದಾಗ ಹಣ ಮೀಸಲಿಡುವ ಪ್ರಶ್ನೆ ಉದ್ಭೂತವಾಗುವುದಿಲ್ಲವಲ್ಲ.

ವಿಜಯ ನಗರ ಉಕ್ಕು ಕಾರ್ಖಾನೆ

ಹಂಪಿಯ ಹತ್ತಿರ ವಿಜಯನಗರ ಉಕ್ಕಿನ ಕಾರ್ಖಾನೆ ಸ್ಥಾಪನೆಯ ಬೇಡಿಕೆ ರಾಜ್ಯಾದ್ಯಂತ ಘೋಷಿಸಲ್ಪಟ್ಟಾಗ, ಮತಗಳ ಮೇಲೆ ಕಣ್ಣಿಟ್ಟ ಇಂದಿರಾ ಗಾಂಧಿ 1969-70ರಲ್ಲಿ ಉಕ್ಕಿನ

(8ನೇ ಪುಟವನ್ನು ನೋಡಿ)

ಗಂಗಾವತಿ ತಾಲ್ಲೂಕಾ ರೈತ ಸಮಾವೇಶ

ದಿನಾಂಕ: 22-2-82 ರಂದು ರಾಯಚೂರು ಜಿಲ್ಲೆ ಗಂಗಾವತಿ ತಾಲ್ಲೂಕು ರೈತ ಸಂಘದ ಪ್ರಥಮ ಸಮಾವೇಶ ನಗರದಲ್ಲಿ ನಡೆಯಿತು.

ಸಮಾವೇಶದ ಅಧ್ಯಕ್ಷತೆಯನ್ನು ಜಿಲ್ಲಾ ಪ್ರಾಂತ ರೈತ ಸಂಘದ ಸಂಚಾಲಕ ಕಾಂ| ಚಂದ್ರಶೇಖರ ಬಾಳೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ, ರಾಜ್ಯ ರೈತ ಸಂಘದ ಪ್ರಧಾನ ಕಾರ್ಯದರ್ಶಿ, ಪಿ. ರಾಮಚಂದ್ರರಾವ್ ಆಗಮಿಸಿದ್ದರು. ಸುಮಾರು 30 ಹಳ್ಳಿಗಳಿಂದ, 80 ರೈತ ಮುಖಂಡರು ಸಮಾವೇಶದಲ್ಲಿ ಭಾಗ ವಹಿಸಿದ್ದರು.

ಕಾ. ಎಸ್ ಎಮ್. ಪಾಟೀಲರು, ಸ್ವಾಗತ ಕೋರುತ್ತ, ರೈತರ ಸಮಸ್ಯೆಗಳು ಮತ್ತು ಅವರ ಪರಿಸ್ಥಿತಿಯ ಬಗ್ಗೆ ವಿವರಿಸಿದರು.

ಕಾ. ಚಂದ್ರಶೇಖರ ಬಾಳೆಯವರು ಇವತ್ತಿನ ಸಮಾವೇಶ ಹಾಗೂ ಅಖಿಲ ಭಾರತ ಸಭಾದ ಹಿನ್ನೆಲೆ ಕಾರ್ಯಕ್ರಮವನ್ನು ವಿವರಿಸಿದರು.

ರೈತ ಮುಖಂಡರಾದ ಶ್ರೀ ಅಯ್ಯನಗೌಡ, ಜನರು ಯಾಕೆ ಸಂಘಟನೆಯಾಗುತ್ತಿಲ್ಲ, ಸಂಘ ಸಂಸ್ಥೆಗಳನ್ನು ನಂಬುತ್ತಿಲ್ಲ ಎಂಬುದರ ಬಗ್ಗೆ ಕೆಲ ಸಂಘಗಳ ಸ್ವಾರ್ಥತೆಯ ಉದಾಹರಣೆಯೊಂದಿಗೆ ತಿಳಿಸಿದರು.

ಶ್ರೀ ರುಕ್ಮಾಂಗಲು ಅವರು ರೈತರ ಸಮಸ್ಯೆಗಳು ಬಹಳ ಬಾಧಿಸುತ್ತಿರುವಾಗ ಕ್ರಾಂತಿಕಾರಿ ಹೋರಾಟದ ಅವಶ್ಯಕತೆಯನ್ನು ವಿವರಿಸುತ್ತಾ ಈ ದೇಶದ ಜೀವನಾಡಿಗಳಾಗಿರುವ ರೈತರು ಹಾಗೂ ಕಾರ್ಮಿಕರು ಬೆರೆತು ಹೋರಾಟ ಮಾಡಬೇಕಾಗಿದೆ ಎಂದರು.

ಕಾಂ| ಭಾಗ್ಯವಂತ, ಗಂಗಾವತಿ ದಲಿತ ಸಂಘರ್ಷ ಸಮಿತಿ ಸಂಚಾಲಕ ಇವರು ತಮ್ಮ ಅನುಭವವನ್ನು ತಿಳಿಸುತ್ತಾ, ರೈತ ಹಾಗೂ ಕಾರ್ಮಿಕರ ಚಿಕ್ಕಾಟ, ಇದರ ಲಾಭ ಪಡೆದುಕೊಂಡು ಭ್ರಷ್ಟ ರಾಜಕೀಯಗಳು ನಡೆಸುತ್ತಿರುವ ಪುಂಡಾಟ, ಸಾಮಾನ್ಯನ ಹಗಲು ಸುಲಿಗೆ, ರೈತ-ಕಾರ್ಮಿಕರನ್ನು ಕಾಣುತ್ತಿರುವ ಸರಕಾರದ ಹೀನ ನೋಟವನ್ನು ಉಗ್ರವಾಗಿ ಖಂಡಿಸುತ್ತಾ ರೈತ ಕಾರ್ಮಿಕರು ಒಂದು ನಾಣ್ಯದ ಎರಡು ಮುಖಗಳು, ಇವರಿಬ್ಬರೂ ಒಂದಾಗಿ ಹೋರಾಟ ಮಾಡಿ ಬಾಳ ಸಫಲತೆ ಕಂಡುಕೊಳ್ಳಬೇಕೆಂದರು.

ಕಾಂ| ಶಿವಪುತ್ರಪ್ಪನವರು ಮಾತನಾಡುತ್ತಾ ರೈತರ ಸಮಸ್ಯೆಗಳ ಕುರಿತು ಕೆಲವು ತೀರ್ಮಾನಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿದರು.

ಕಾಂ| ಪಿ. ರಾಮಚಂದ್ರರಾವ್‌ರು 1979ರ ಮುಂಚಿನ ಪ್ರಾಂತ ರೈತ ಸಂಘಟನೆ ಹಾಗೂ ನಂತರದ ಸಂಘಟನೆಯ ರೀತಿ-ನೀತಿ-ಹಾಗೂ ಮಾರ್ಚ್ ಹನ್ನೊಂದರಿಂದ ಹದಿನಾಲ್ಕರವರೆಗೆ ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕಿನಲ್ಲಿ ನಡೆಯುವ ರಾಜ್ಯ ಸಮ್ಮೇಳನದ ಕಾರ್ಯಕ್ರಮದ ಬಗ್ಗೆ ವಿವರಿಸುತ್ತಾ, ಹಿಂದೆ ಕೊಳ್ಳೆ ಹೊಡೆಯುತ್ತಿದ್ದ ರಾಜರಾಗಲಿ ನಂತರದ ಬ್ರಿಟೀಷರಾಗಲಿ ಈಗಿರುವ ಬಂಡವಾಳಶಾಹಿ ಸರಕಾರವಾಗಲಿ ಬಡವರನ್ನು ಶೋಷಿಸುವಲ್ಲಿ ಒಂದೇ ಆಗಿರುವುದರಿಂದ, ಸ್ವಾತಂತ್ರ್ಯ ಎಂಬ ಪದಕ್ಕೆ ಅರ್ಥವಿಲ್ಲ ಎಂದರು. ಈ ಸಮಾಜದ ವ್ಯವಸ್ಥೆ ಬದಲಾಗಬೇಕು ಎಂದು ಎಡಪಂಥೀಯ ಧೋರಣೆಗಳನ್ನು ತಿಳಿಸುತ್ತ ಈಗಿರುವ ಸಮಾಜದ ವ್ಯವಸ್ಥೆ ವಿರುದ್ಧ ರೈತರು ಹಾಗೂ ಕಾರ್ಮಿಕರು ಒಂದಾಗಿ ಹೋರಾಟ ಮಾಡಿ ನಿಜವಾದ ಸ್ವಾತಂತ್ರ್ಯ ಪಡೆದುಕೊಳ್ಳಬೇಕೆಂದು ತಮ್ಮ ಸವಿಸ್ತಾರ ಭಾಷಣದ ಮುಖಾಂತರ ಕರೆಯಿತ್ತರು.

ನಂತರ ಸಭೆಯಲ್ಲಿ ಈ ಕೆಳಗೆ ಕಾಣಿಸಿದ ರೈತ-ಕಾರ್ಮಿಕ ಬೇಡಿಕೆಗಳ ಗೊತ್ತುವಳಿಯನ್ನು ನಿರ್ಣಯಿಸಲಾಯಿತು.

1) ಎಲ್ಲಾ ಫೇನಾಲ್ಪಿಗಳನ್ನು ಕೂಡಲೇ ರದ್ದುಗೊಳಿಸಿ ಕಾಲುವೆಯಿಂದ ನೀರು ಸರಬರಾಜು ವೈಜ್ಞಾನಿಕ ರೀತಿಯಲ್ಲಿ ದೊರೆಯುವಂತಾಗಬೇಕು.

2) ಬೆಟರಮೆಂಟ್ ಲೇವಿಯನ್ನು ರದ್ದುಗೊಳಿಸಿ ಈಗಾಗಲೇ ಪಾವತಿ ಮಾಡಿದವರಿಗೆ ಮರಳಿ ಕೊಡುವಂತಾಗಬೇಕು.

3) ಗಂಗಾವತಿ ಸಕ್ಕರೆ ಕಾರ್ಖಾನೆ (ಮರಳಿ)ಯನ್ನು ರಾಷ್ಟ್ರೀಕರಣಗೊಳಿಸಬೇಕು. (ಎಲ್ಲಾ ಖಂಡಸಾರಿ ಸಕ್ಕರೆ ಕಾರ್ಖಾನೆಗೆ ಲೈಸನ್ಸ್‌ಗಳನ್ನು ರದ್ದುಗೊಳಿಸಬೇಕು) ರೈತರ ಶೇರು ಹಣವನ್ನು ಮರಳಿ ಕೊಡಬೇಕು. ಬ್ಯಾಂಕಿನಲ್ಲಿ ಶೇರಿನ ಸಾಲವಿದ್ದಲ್ಲಿ ಅದು ರದ್ದಾಗಬೇಕು.

4) ಕಬ್ಬು ಟನ್ನಿಗೆ 300-00ರೂ. ದೊರೆಯಬೇಕು. ಕಬ್ಬು ಬೆಳೆಯುವ ಪ್ರದೇಶದಲ್ಲಿ ಪರ್ಯಾಯ ಬೆಳೆ ತೆಗೆಯಲು ಪರವಾನಿಗಿ ಕೊಡಬೇಕು. ಎಲ್ಲಾ ರೈತರ ಬೆಳೆಗೆ ಬೆಂಬಲಿತ ಬೆಲೆ ದೊರೆಯುವಂತಾಗಬೇಕು.

5) ಕಾಲುವೆ ಒಡೆಯುವುದನ್ನು ತಡೆಯಲು ಸರಿಯಾದ ದುರಸ್ತಿ ಹಾಗೂ ಬಸಾಪಟ್ಟಣದಿಂದ ರಾಯಚೂರುವರೆಗೆ ಒಂದು ಪರ್ಯಾಯ ಕಾಲುವೆ.

6) ಹಳ್ಳಿಗಳಿಗೆ ಸಹಕಾರಿ ಸಂಘಗಳ ವ್ಯವಸ್ಥೆ, ಸಹಕಾರಿ ಸಾಲಗಳಲ್ಲಿ ಆಗುವ ವ್ಯವಹಾರಗಳಲ್ಲಿ ತಡೆ ಸಾಲ ವಸೂಲಿಗಾಗಿ ಅಕ್ರಮ ಜಪ್ತಿಯ ತಡೆ; ಸಣ್ಣ ರೈತರ ಕೃಷಿ ಕಾರ್ಮಿಕರ ಸಾಲ ಮಾಫೀ ಮಾಡುವದು.

7) ಗೊಬ್ಬರ ಕ್ರಿಮಿನಾಶಕ ಕೃಷಿ ಸಲಕರಣೆ ಅವಶ್ಯಕ ಆಹಾರ ಸಾಮಾಗ್ರಿಗಳನ್ನು ಕಡಿಮೆ ಬೆಲೆಯಲ್ಲಿ (ಸಬ್ಸಿಡಿ) ದೊರೆಯುವಂತಾಗಬೇಕು.

8) ಕೃಷಿ ಕಾರ್ಮಿಕರಿಗೆ ಕನಿಷ್ಟ ಕೂಲಿ, ನಗರ ಕಾರ್ಮಿಕರಿಗೆ ಸಿಗುವ ಸೌಲಭ್ಯಗಳು ಹಾಗೂ ಉತ್ಪನ್ನ ವೇತನ ಕೃಷಿ ಕಾರ್ಮಿಕ ಸಣ್ಣ ರೈತರಿಗೆ ದೊರೆಯಬೇಕು.

9) ಸರ್ಕಾರಿ ಹೆಚ್ಚುವರಿ ಭೂಮಿ, ಖಾಸಗಿ ಹೆಚ್ಚುವರಿ ಭೂಮಿ ಕೃಷಿ ಕಾರ್ಮಿಕರಿಗೆ ಸರಿಯಾಗಿ ಹಂಚಿ ಪಟ್ಟಾವನ್ನು ಕೂಡಲೇ ಒದಗಿಸಬೇಕು. ●

ವಾರ್ಷಿಕ ಮಹಾಸಭೆ

ದ ಕ ಜಿಲ್ಲೆಯ ಕೋಣಿಯ ಯುವಜನ (ಡಿ ವೈ ಇಫ್ ಐ) ಘಟಕದ 6ನೇ ವಾರ್ಷಿಕ ಮಹಾ ಸಭೆಯು 3-3-82 ರಂದು ಕೋಣಿಯಲ್ಲಿ ಜರುಗಿತು. ಅಧ್ಯಕ್ಷತೆಯನ್ನು ಕೆ. ಗುರುರಾಜ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸುರತ್ಕಲ್ ಇಂಜನಿಯರಿಂಗ್ ಕಾಲೇಜ್‌ನ ಉಪನ್ಯಾಸಕರಾದ ಕೆ. ರಾಜೇಂದ್ರ ಉಡುಪ ಆಗಮಿಸಿದ್ದರು.

ಆರಂಭದಲ್ಲಿ ಡಿ ವೈ ಎಫ್ ಐ ರಾಜ್ಯ ಸಮಿತಿಯ ಉಪಾಧ್ಯಕ್ಷ ವಿ. ಮಹಾಬಲರವರು ಧ್ವಜಾರೋಹಣ ಗೈದರು.

ಕೆ. ನಾರಾಯಣ ಆಚಾರ್ ಅವರು ಸಭಿಕರನ್ನು ಸ್ವಾಗತಿಸಿದ ನಂತರ ಸಂಘಟನೆಯ ಕಾರ್ಯದರ್ಶಿ ಕೆ. ವೆಂಕಟೇಶ್ ನಾಯಕ್ ಕಳೆದ ವರ್ಷದ ಚಟುವಟಿಕೆಯ ವರದಿಯನ್ನು ಸಲ್ಲಿಸಿದರು. ವರದಿ ಹಾಗೂ ಲೆಕ್ಕಪತ್ರವನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

ನಂತರ 15 ಸದಸ್ಯರ ನೂತನ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲಾಯಿತು. ಕಾರ್ಯಕಾರಿ ಸಮಿತಿಯ ಅಧ್ಯಕ್ಷರಾಗಿ ಕೆ. ಆನಂದ ಭಂಡಾರಿ, ಉಪಾಧ್ಯಕ್ಷರಾಗಿ ಕೆ.ಎಸ್. ಸಂಜಯ ಮತ್ತು ಕೆ. ದಾರ, ಕಾರ್ಯದರ್ಶಿಯಾಗಿ ಕೆ. ನಾರಾಯಣ ಆಚಾರ್, ಸಹಕಾರ್ಯದರ್ಶಿಯಾಗಿ ಕೆ. ಗುರುರಾಜ್, ಕ್ರೀಡಾಕಾರ್ಯದರ್ಶಿಯಾಗಿ ಕೆ. ಚಂದ್ರ ಇವರುಗಳನ್ನು ಪದಾಧಿಕಾರಿಗಳಾಗಿ ಆರಿಸಲಾಯಿತು.

ಕೊನೆಯಲ್ಲಿ ಕೆ. ರಾಮಚಂದ್ರ ಸಭೆಗೆ ವಂದಿಸಿದರು.

ಜಿಲ್ಲಾ

ಡಿ. ವೈ. ಎಫ್. ಐ. ಸಮ್ಮೇಳನ

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ.) ಮೈಸೂರು ಜಿಲ್ಲಾ ಸಮ್ಮೇಳನವು ಮೈಸೂರು ನಗರದ ಗಾಂಧಿನಗರದಲ್ಲಿ 28-2-1982 ರಂದು ಯಶಸ್ವಿಯಾಗಿ ನಡೆಯಿತು.

ರಾಜ್ಯ ಬಂಡಾಯ ಸಾಹಿತ್ಯ ಸಂಘಟನಾ ಸಂಚಾಲಕರಾದ ರಮಜಾನ್ ದರ್ಗಾರವರು ಸಮ್ಮೇಳನವನ್ನು ಉದ್ಘಾಟಿಸಿದರು. ಸಮುದಾಯದ ಲಿಂಗದೇವರು ಹಳೆಮನೆ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಮೊದಲಿಗೆ ಡಿ. ವೈ. ಎಫ್. ಐ. ಮೈಸೂರು ಜಿಲ್ಲಾ ಸಮಿತಿಯ ಅಧ್ಯಕ್ಷರಾದ ಕಾಂ| ಎಲ್. ಜಗನ್ನಾಥ್‌ರವರು ಧ್ವಜಾರೋಹಣ ಮಾಡಿದರು. ಡಿ.ವೈ.ಎಫ್.ಐ. ಗಾಂಧೀನಗರ ಘಟಕದ ಅಧ್ಯಕ್ಷರಾದ ಕಾಂ| ಮಂಜುನಾಥಸ್ವಾಮಿ ಸ್ವಾಗತಿಸಿದರು. ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ| ಜಿ.ವಿ. ಶ್ರೀರಾಮರೆಡ್ಡಿಯವರು ಪ್ರತಿನಿಧಿ ಸಭೆಯನ್ನು ಉದ್ಘಾಟಿಸಿದರು. ರಾಷ್ಟ್ರದಲ್ಲಿ ಹಾಗು ರಾಜ್ಯದಲ್ಲಿ ಯುವಜನತೆ ಎದುರಿಸುತ್ತಿರುವ ಗಂಭೀರ ಸಮಸ್ಯೆಗಳು ಹಾಗು ಡಿ. ವೈ. ಎಫ್. ಐ. ಧ್ಯೆಯೋದ್ದೇಶ, ಕಾರ್ಯಕ್ರಮಗಳ ಬಗ್ಗೆ ಕಾಂ| ರೆಡ್ಡಿಯವರು ತಮ್ಮ ಧೀರ್ಘ ಭಾಷಣದಲ್ಲಿ ವಿವರಣೆ ನೀಡಿದರು.

ಪ್ರಗತಿಪರ ಇರಾಸಿ ವಿದ್ಯಾರ್ಥಿ ಸಂಘಟನೆಯ ಕಾಂ| ಸೈಮಕ್, ಎಸ್. ಎಫ್. ಐ. ಯ ಕಾಂ| ಆರ್. ಜಯಕುಮಾರ್, ಬೆಂಗಳೂರು ಜಿಲ್ಲಾ ಡಿ.ವೈ.ಎಫ್.ಐ ಕಾರ್ಯದರ್ಶಿ ಕಾಂ| ಶಿವರಾಂ ರವರುಗಳು ಸಮ್ಮೇಳನಕ್ಕೆ ಶುಭಕೋರಿ ಮಾತನಾಡಿದರು.

ಮೈಸೂರು ಜಿಲ್ಲಾ ಡಿ.ವೈ.ಎಫ್ ಐ ಕಾರ್ಯದರ್ಶಿ ಕಾಂ| ಜಿ. ಜಯರಾಂ ಮಂಡಿಸಿದ ಕರಡು ವರದಿಯ ಮೇಲೆ ಬಹಳಷ್ಟು ಯುವಕರು ಚರ್ಚಿಸಿದರು. ಅಲ್ಪಸ್ವಲ್ಪ ತಿದ್ದುಪಡಿಗಳೊಂದಿಗೆ ವರದಿಯನ್ನು ಅಂಗೀಕರಿಸಲಾಯಿತು.

ಸಮ್ಮೇಳನವು ಈ ಕೆಳಗಿನ ಮಹತ್ವದ ನಿರ್ಣಯಗಳನ್ನು ಅಂಗೀಕರಿಸಿತು:

1. ದೇಶದಾದ್ಯಂತ ಹರಿಜನರ ಮೇಲೆ ನಡೆಯುತ್ತಿರುವ ದಬ್ಬಾಳಿಕೆಯನ್ನು ತೀವ್ರವಾಗಿ ಖಂಡಿಸಿದ ಸಮ್ಮೇಳನವು ಶೋಷಣೆಗೊಳಪಟ್ಟ ಎಲ್ಲಾ ಜನವರ್ಗದೊಂದಿಗೆ ಸೇರಿ ದಲಿತರು ಹೋರಾಟಕ್ಕೆ ಮುಂದಾಗಬೇಕೆಂದು ಕರೆ ನೀಡಿತು.

2. ದೇಶದಾದ್ಯಂತ ಬೆಳೆದು ಬರುತ್ತಿರುವ ಎಲ್ಲಾ ಜನವರ್ಗದ ಹೋರಾಟಗಳನ್ನು ಬಗ್ಗು ಬಡಿಯುವ ದುರುದ್ದೇಶದಿಂದ ತರಲಾಗಿರುವ ಅಗತ್ಯ ಸೇವಾ ಕಾಯಿದೆ ಮತ್ತು ರಾಷ್ಟ್ರೀಯ ಭದ್ರತಾ ಕಾಯಿದೆಗಳನ್ನು ವಿರೋಧಿಸಿದ ಸಮ್ಮೇಳನವು ಈ ಕರಾಳ ಕಾಯಿದೆಗಳನ್ನು ರದ್ದುಪಡಿಸಬೇಕೆಂದು ಒತ್ತಾಯಿಸಿತು.

3. ಕೇಂದ್ರ ಸರಕಾರದ ಆಯವ್ಯಯ ಪಟ್ಟಿಯಲ್ಲಿ ಅಂಚೆದರಗಳನ್ನು ವಿಪರೀತವಾಗಿ ಏರಿಸಿದ್ದನ್ನು ಖಂಡಿಸಿದ ಸಮ್ಮೇಳನವು ಈ ಬೆಲೆ ಏರಿಕೆಯು ಸರಕಾರದ ದಿವಾಳಿಕೋರ ಆರ್ಥಿಕ ನೀತಿಯ ಫಲ ಅಭಿಪ್ರಾಯ ಪಟ್ಟಿತು.

4. ದೇಶದ ದ್ಯಂತ ಆಡಳಿತ ವರ್ಗದ ಕೃಪಾಪೋಷಿತ ಗೂಂಡಾ ಪಡೆಗಳು ಪತ್ರಕರ್ತರ ಮೇಲೆ ನಡೆಸುತ್ತಿರುವ ಹಲ್ಲೆಗಳನ್ನು ಖಂಡಿಸಿದ ಸಮ್ಮೇಳನವು ಇಂದು ಪತ್ರಿಕಾ ಸ್ವಾತಂತ್ರ್ಯವು ಅಪಾಯದಲ್ಲಿದೆಯೆಂದು ಅಭಿಪ್ರಾಯಪಟ್ಟಿತು.

5. ಮೈಸೂರು-ಬೆಂಗಳೂರು ನಡುವಣ ರೈಲುಮಾರ್ಗದ ತ್ವರಿತ ಬ್ರಾಡ್ ಗೇಜ್ ಪರಿವರ್ತನೆ, ಅದನ್ನು ಸತ್ಯಮಂಗಲದವರೆಗೆ ವಿಸ್ತರಣೆ ಹಾಗೂ ಮೈಸೂರು ನಗರಕ್ಕೆ ಸುಸಜ್ಜಿತ ರಂಗಮಂದಿರ ಒಂದನ್ನು ಸ್ಥಾಪಿಸಲು ಒತ್ತಾಯಿಸಲಾಯಿತು.

ಇತರ ಹಲವಾರು ನಿರ್ಣಯಗಳನ್ನು ಅಂಗೀಕರಿಸಿದ ಸಮ್ಮೇಳನವು ಸಿಮೆಂಟ್ ಹಗರಣದಲ್ಲಿ ಅಪಾದಿತರಾಗಿರುವ ರಾಜ್ಯದ ಭ್ರಷ್ಟ ಮುಖ್ಯಮಂತ್ರಿ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿತು. ಏರುತ್ತಿರುವ ಬೆಲೆಗಳನ್ನು ತಡೆಯಲು ಹಾಗು ಜನರ ಜೀವಕ್ಕೆ ಭದ್ರತೆ ಒದಗಿಸಲು ಪೂರ್ಣವಾಗಿ ಸರಕಾರ ವಿಫಲಗೊಂಡಿದ್ದು ಇದರ ವಿರುದ್ಧ ಹೋರಾಟ ನಡೆಸಲು ಯುವಕರಿಗೆ ಕರೆನೀಡಿತು.

ಸಮ್ಮೇಳನವು ಈ ಕೆಳಗಿನ ಪದಾಧಿಕಾರಿಗಳನ್ನು ಸರ್ವಾನುಮತದಿಂದ ಆಯ್ಕೆ ಮಾಡಿತು. ಎಲ್. ಜಗನ್ನಾಥ್ (ಅಧ್ಯಕ್ಷರು), ಮಂಜುನಾಥಸ್ವಾಮಿ (ಉಪಾಧ್ಯಕ್ಷ), ಜಿ. ಜಯರಾಂ (ಪ್ರ. ಕಾರ್ಯದರ್ಶಿ), ಮಹದೇವು (ಕಾರ್ಯದರ್ಶಿ), ಮೋಹನ್ ಕುಮಾರ್ (ಖಜಾಂಚಿ) ಮತ್ತು ಇತರ 8 ಸಮಿತಿ ಸದಸ್ಯರು.

ಹೋರಾಟದ ಮೂಲಕ ಮಾತ್ರ ಪರಿಹಾರ ಸಾಧ್ಯ

ರೈತರು ಮತ್ತು ರೈತ ಕೃಷಿ ಕಾರ್ಮಿಕರು ತಮ್ಮ ಸಮಸ್ಯೆಗಳಿಗೆ ಹೋರಾಟದ ಮೂಲಕ ಮಾತ್ರ ಪರಿಹಾರ ಪಡೆಯಲು ಸಾಧ್ಯ ಎಂದು ಕಾಂ| ರಾಮಣ್ಣ ರೈ ಕಾಪುನಲ್ಲಿ ನಡೆದ ಬಹಿರಂಗ ಸಭೆಯುನ್ನುದ್ದೇಶಿಸಿ ತಿಳಿಸಿದರು. ಅವರು ಉಡುಪಿ ತಾಲ್ಲೂಕಿನ ಕಾಪುನಲ್ಲಿ ನಡೆದ ದ. ಕ ಜಿಲ್ಲಾ 7ನೇ ರೈತ ಸಮ್ಮೇಳನದ ಅಂಗವಾಗಿ ನಡೆದ ಬಹಿರಂಗ ಸಭೆಯುನ್ನುದ್ದೇಶಿಸಿ ಮಾತನಾಡಿದರು.

ಫೆಬ್ರವರಿ 28ರ ಸಂಜೆ ಸಮ್ಮೇಳನದ ಅಂಗವಾಗಿ ರೈತರ, ಕೃಷಿ ಕಾರ್ಮಿಕರ ಮತ್ತು ಕಾರ್ಮಿಕರ ಬೃಹತ್ ಮೆರವಣಿಗೆ ಹೊರಡು ಕಾಪು ಮೈದಾನದಲ್ಲಿ ಕಾಂ| ಪಿ.ಆರ್. ರಾವ್‌ರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ಜರುಗಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕಾಸರಗೋಡು ಲೋಕಸಭಾ ಸದಸ್ಯರಾದ ಕಾಂ| ಎಂ. ರಾಮಣ್ಣ ರೈಯವರು, ಮುಂದುವರೆದ ಧೀರ ಹೋರಾಟಗಳ ಮೂಲಕ ಕೇರಳದ ರೈತರು ಗಳಿಸಿದ ಸಾಧನೆಗಳನ್ನು ವಿವರಿಸಿದರು. ನಮ್ಮ ದೇಶದ ಆಳುವ ವರ್ಗಗಳು ಅನುಸರಿಸಿಕೊಂಡು ಬರುತ್ತಿರುವ ರೈತ ವಿರೋಧಿ, ಕಾರ್ಮಿಕ ವಿರೋಧಿ ಮತ್ತು ಜನಸಾಮಾನ್ಯರ ವಿರೋಧಿ ನೀತಿಗಳಿಂದಾಗಿ ಇಡೀ ದೇಶದಲ್ಲಿ ಅತೃಪ್ತಿ ಕುದಿಯುತ್ತಿದೆ. ಎಲ್ಲಾ ವರ್ಗಗಳ ಜನರೂ ಹೋರಾಟದ ಕಣದಲ್ಲಿದ್ದಾರೆ. ತಮ್ಮ ಸಂಘಟನೆಯನ್ನು ಇನ್ನಷ್ಟು ಬಲಪಡಿಸಿ ತಮ್ಮ ಹಕ್ಕುಗಳಿಗಾಗಿ ಹೋರಾಟ ನಡೆಸಬೇಕು; ವರ್ಗಜಾಗೃತಿ ಬೆಳೆಸಬೇಕು ಎಂದು ಕರೆ ನೀಡಿದರು.

ಸಿಪಿಐ (ಎಂ) ದ.ಕ. ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕಾಂ| ಕೆ. ಆರ್. ಶ್ರೀಯಾನ್ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ರೈತರು ಕಾರ್ಮಿಕರು ಸಂಘಟಿತ ಹೋರಾಟ ನಡೆಸಬೇಕೆಂದು ಕರೆ ನೀಡಿದರು.

ಆರಂಭದಲ್ಲಿ ಕಾಂ| ಅಬ್ರಹಾಂ ಕರ್ಕಡ ಸ್ವಾಗತಿಸಿದರು. ಕೊನೆಯಲ್ಲಿ ಕಾಂ| ಜನಾರ್ಧನ್ ನಾಯಕ್ ಧನ್ಯವಾದ ಸಲ್ಲಿಸಿದರು.

ವಿಜಯವಾಡದಲ್ಲಿ ನಡೆದ

ಲೇಖಾಂಕ—2

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹನ್ನೊಂದನೇ ಅಧಿವೇಶನದ ಕುರಿತು

ರಾಷ್ಟ್ರೀಯ ಪ್ರಶ್ನೆಗಳ ಸೈದ್ಧಾಂತಿಕ ಆಧಾರ ಅಂತಾರಾಷ್ಟ್ರೀಯ ಪಥಕ್ಕಿಂತ ಭಿನ್ನವಾಗಿರಲು ಸಾಧ್ಯವಿಲ್ಲ. ಹಿಂದಿನ ಲೇಖನದಲ್ಲಿ ಹೇಳಿದಂತೆ ಕಾಂ| ಲೆನಿನ್‌ರ ಪ್ರಕಾರ ಇರುವುದು ಕೇವಲ ಒಂದೇ ಅಂತರ್‌ರಾಷ್ಟ್ರೀಯತೆ ತನ್ನ ಸ್ವಂತ ದೇಶದಲ್ಲಿ ಕ್ರಾಂತಿಕಾರೀ ಹೋರಾಟದಲ್ಲಿ ಮನಃಪೂರ್ವಕವಾಗಿ ದುಡಿಯುವುದು ಹಾಗೂ ಬೇರೆ ಎಲ್ಲಾ ದೇಶಗಳಲ್ಲಿ ಇಂತಹದೇ ಮಾರ್ಗವನ್ನು ಬೆಂಬಲಿಸುವುದು. ಆದ್ದರಿಂದ ನಮ್ಮ ದೇಶದಲ್ಲಿನ ಕ್ರಾಂತಿಕಾರೀ ಹೋರಾಟಗಳಲ್ಲಿ ಮನಃಪೂರ್ವಕವಾಗಿ ದುಡಿಯುವುದು ನಮ್ಮ ಸರಿಯಾದ ಮಾರ್ಗ. ಇದು ನಮ್ಮ ಅಂತರ್‌ರಾಷ್ಟ್ರೀಯತೆಯ ರಾಷ್ಟ್ರೀಯ ಭಾಗ ಹಾಗೂ ಭಾರತದ ಹೊರಗಿನ ಪ್ರತಿಯೊಂದು ಕಮ್ಯುನಿಸ್ಟ್ ಪಕ್ಷದ ಅಂತರ್‌ರಾಷ್ಟ್ರೀಯತೆಯ ಅಂತರ್‌ರಾಷ್ಟ್ರೀಯ ಭಾಗ.

ಹೊಸ ಯುಗವನ್ನು ವಿಶ್ಲೇಷಿಸುತ್ತಾ ಈಗಿನದ್ದು ರಾಷ್ಟ್ರೀಯ ವಿಮೋಚನೆಯ ಯುಗ, ಸಾಮ್ರಾಜ್ಯಶಾಹಿ ತನ್ನ ವಸಾಹತುಗಳನ್ನು ಕಳಕೊಂಡಂತಹ ಯುಗ ಎಂದು ಹೇಳಲಾಗಿದೆ. ಭಾರತ ಹಾಗೆ ವಸಾಹತುವಾಗಿದ್ದ ದೇಶಗಳಲ್ಲಿ ಒಂದು. ಕಾರ್ಮಿಕ ವರ್ಗದ ನೇತೃತ್ವದಲ್ಲಿ ನಡೆದ ರಾಷ್ಟ್ರೀಯ ವಿಮೋಚನಾ ಸಮರಗಳು ಬಂಡವಾಳಶಾಹಿಗಳ ಹಾಗೂ ಭೂಮಾಲಿಕರ ವರ್ಗ ಆಡಳಿತವನ್ನು ಕೊನೆಗಾಣಿಸಿದಂತೆ ಭಾರತದಲ್ಲಿ ಆಗಲಿಲ್ಲ. ಇಲ್ಲಿ ನಮ್ಮ ದೇಶದ ಬೂರ್ಜ್ವಾ ವರ್ಗದ ನೇತೃತ್ವದಲ್ಲಿನ ಸ್ವಾತಂತ್ರ್ಯ ಹೋರಾಟ ಬೂರ್ಜ್ವಾ ಹಾಗೂ ಭೂಮಾಲಿಕರು ಪರಸ್ಪರ ಕೈಮಿಲಾಯಿಸಿ ಪ್ರಭುತ್ವವನ್ನು ಸ್ಥಾಪಿಸುವುದರಲ್ಲಿ ಯಶಸ್ವಿಯಾಯಿತು. ಈ ಕೂಟದ ನೇತೃತ್ವ ವಹಿಸಿದ್ದು ನಮ್ಮ ದೇಶದ ಹಿರಿ ಬೂರ್ಜ್ವಾ ವರ್ಗ. ಅಲ್ಲದೆ ವಿದೇಶೀ ಹಣಕಾಸು ಬಂಡವಾಳದೊಡನೆ ಈ ಪ್ರಭುತ್ವ ಹೆಚ್ಚೆಚ್ಚು ಸಹಕರಿಸಿತು. ವರ್ಷದಿಂದ ವರ್ಷಕ್ಕೆ ಭಾರತೀಯ ಹಿರಿ ಬೂರ್ಜ್ವಾ ವರ್ಗ ತನ್ನ ಪ್ರಭುತ್ವ ಸಾಧನವಾದ ಭಾರತ ಸರಕಾರದ ಮೂಲಕ ವಿದೇಶೀ ಹಣಕಾಸು ಬಂಡವಾಳದೊಂದಿಗೆ ಸಹಕರಿಸುವುದನ್ನು ನಾವು ನೋಡಿದ್ದೇವೆ. ಇದಕ್ಕೆ ಇತ್ತೀಚಿನ ಉದಾಹರಣೆಯೆಂದರೆ ವ್ಯಾಪಕ ಪ್ರತಿಭಟನೆಗೊಳಗಾದ ಐ.ಎಮ್.ಎಫ್. ಸಾಲ.

ರಾಷ್ಟ್ರೀಯ ಪ್ರಜಾಪ್ರಭುತ್ವ

ನಮ್ಮ ಮೂಲ ವಿಷಯಕ್ಕೆ ಹಿಂದಿರುಗೋಣ. ಹೊಸ ಯುಗ ಈ ಮಾಜೀ ವಸಾಹತುಗಳಲ್ಲಿ ಕಾರ್ಮಿಕ ವರ್ಗ ಪ್ರಜಾತಾಂತ್ರಿಕ ಕ್ರಾಂತಿಗಳನ್ನು ಪೂರ್ಣಗೊಳಿಸುವ ಸಾಧ್ಯತೆಗಳನ್ನು ಕಲ್ಪಿಸಿಕೊಟ್ಟಿತು. ಈ ಪ್ರಜಾತಾಂತ್ರಿಕ ಕ್ರಾಂತಿಗಳ ಹಾಗೂ ಅದಕ್ಕನುಗುಣವಾಗಿ ಈ ಮಾಜೀ ವಸಾಹತುಗಳ ಆರ್ಥಿಕ ಬೆಳವಣಿಗೆಯ ಸ್ವರೂಪ ಸ್ವಾಭಾವಿಕವಾಗಿಯೇ ವರ್ಗಗಳ ಬೆಳವಣಿಗೆಯ ಮಟ್ಟ, ಅವುಗಳ ಪ್ರೌಢತೆ ಹಾಗೂ ಅವುಗಳ ಸಂಘಟನೆಗಳನ್ನು ಹೊಂದಿಕೊಂಡಿದೆ. ಹೀಗೆ ಸಾಮಾಜಿಕ ಬೆಳವಣಿಗೆ ಇಲ್ಲವೆಂದೇ ಹೇಳಬಹುದಾದ ಹಲವು ಶೋಷಕ ವರ್ಗಗಳು ಸಾಕಷ್ಟು ಬೆಳವಣಿಗೆಯಾಗದಿರುವ, ಊಳಿಗ ಮಾನ್ಯ ಇತ್ಯಾದಿ ಇರುವ ಸುಮಾರಾಗಿ ಪಿತೃಪ್ರಧಾನವೆನ್ನಬಹುದಾದ ಸಮಾಜವಿದ್ದು, ಸಾಮ್ರಾಜ್ಯಶಾಹಿಗಳ ಹಿಡಿತಕ್ಕೊಳಗಾಗಿ ಅವರು ಕೇವಲ ತಮ್ಮ ಹಿತಾಸಕ್ತಿಗನುಗುಣವಾಗಿ ಮಾತ್ರ ಕಾರ್ಯ ನಿರ್ವಹಿಸುವ ಪ್ರಭುತ್ವ ಸಾಧನವನ್ನು ಬೆಳೆಸುತ್ತಲಿದ್ದ ಅಥವಾ ಬೆಳೆಸಿದ್ದ ಪ್ರದೇಶವೊಂದು ಸ್ವತಂತ್ರವಾದರೆ, ಆಗ ಇರುವ ಏಕೈಕ ಸಂಘಟಿತ ಆಳುವ ವರ್ಗವಾದ ಸಾಮ್ರಾಜ್ಯಶಾಹಿಗಳಿಂದ ಸ್ವತಂತ್ರವಾದರೆ, ಅಲ್ಲಿ ಇಂಥ ವಸ್ತುನಿಷ್ಠ ಪರಿಸ್ಥಿತಿಯಲ್ಲಿ ಕಾರ್ಮಿಕ ವರ್ಗದ ಸಿದ್ಧಾಂತಕ್ಕೆ ಬದ್ಧವಾದ ಪಕ್ಷವೊಂದು ಅಸ್ತಿತ್ವದಲ್ಲಿದ್ದು, ಈ ವ್ಯಕ್ತಿನಿಷ್ಠ ಶರತ್ತೂ ಪೂರೈಸಿದರೆ ಅಂತಹ ಪ್ರಭುತ್ವವನ್ನು 'ರಾಷ್ಟ್ರೀಯ ಪ್ರಜಾಪ್ರಭುತ್ವ'ವಾಗಿ ಬೆಳೆಸಲು, ವರ್ಗಗಳ ಸುಮಾರಾಗಿ ಎಲ್ಲಾ ಆರಂಭಿಕ ಸ್ವರೂಪಗಳನ್ನು ಒಂದಾಗಿ ಸಂಘಟಿಸಿ ಈ ಒಂದು 'ರಾಷ್ಟ್ರೀಯ ಕೂಟ' ಏರ್ಪಡಿಸಿ ತನ್ನ ಸ್ವಾತಂತ್ರ್ಯವನ್ನು ರಕ್ಷಿಸಿಕೊಂಡು, ಸಮಾಜವಾದೀ ದೇಶಗಳ ನಿಕಟ ಸಹಕಾರದಿಂದ ರಾಷ್ಟ್ರೀಯ ಆರ್ಥಿಕತೆಯನ್ನು ಅಭಿವೃದ್ಧಿ ಪಡಿಸುವ ಸಾಧ್ಯತೆ ಇದೆ ಹಾಗೂ ಇಂತಹದೊಂದು ಸಂದರ್ಭದಲ್ಲಿ ಇಂತಹ ದೇಶ ಬಂಡವಾಳಶಾಹೀ ಅಭಿವೃದ್ಧಿಯ ಹಂತದ ಮೂಲಕ ಹಾದು ಹೋಗದೇನೇ ಬೆಳವಣಿಗೆ ಹೊಂದಲು ಸಾಧ್ಯ. (ಇದು 'ರಾಷ್ಟ್ರೀಯ ಪ್ರಜಾಪ್ರಭುತ್ವ'ದ ಏಕಮಾತ್ರ ಸ್ವರೂಪವಾಗಿರಬೇಕೆಂದೇನಿಲ್ಲ . ಎಂಬುದರ ಬಗ್ಗೆ ಓದುಗರು ಎಚ್ಚರ ವಹಿಸಬೇಕು. ಉದಾಹರಣೆಗೆ, ವರ್ಗಗಳು ಬೆಳವಣಿಗೆ ಹೊಂದಿರುವ ಮಾಜೀ ವಸಾಹತು ದೇಶದಲ್ಲೂ ಕಾರ್ಮಿಕ ವರ್ಗದ ಪಕ್ಷವೊಂದು ನಾಯಕತ್ವದಲ್ಲಿದ್ದು ಸಾಮ್ರಾಜ್ಯಶಾಹಿಗಳೊಡನೆ ಸಹಕರಿಸುವ ಕೆಲವು ವ್ಯಕ್ತಿಗಳನ್ನು ಬಿಟ್ಟು ಉಳಿದೆಲ್ಲಾ ವರ್ಗಗಳನ್ನು ಕಾರ್ಮಿಕ ವರ್ಗದ ನೇತೃತ್ವದಲ್ಲಿ ಯಶಸ್ವಿಯಾಗಿ ಒಳಗೊಳ್ಳುದು ಸಾಧ್ಯವಾದರೆ ಬಂಡವಾಳಶಾಹಿಯಲ್ಲದ ಅಭಿವೃದ್ಧಿ ಮಾರ್ಗ ಅನುಸರಿಸುವ 'ರಾಷ್ಟ್ರೀಯ ಪ್ರಜಾಪ್ರಭುತ್ವ'ದ ಒಂದು ಸ್ವರೂಪ ಅಸ್ತಿತ್ವಕ್ಕೆ ಬರಲು ಸಾಧ್ಯವಿದೆ.)

ಭಾರತದ ಸಂದರ್ಭದಲ್ಲಿ ರಾಷ್ಟ್ರೀಯ ಪ್ರಜಾಪ್ರಭುತ್ವ ಹಾಗೂ ಬಂಡವಾಳಶಾಹಿಯತ್ತದ ಪಥ ಅಪ್ರಸ್ತುತವಾಗಿತ್ತು. ಆದರೂ ಸೋವಿಯತ್ ಒಕ್ಕೂಟ ಕಮ್ಯೂನಿಸ್ಟ್ ಪಕ್ಷದ ಈ ಹಿಂದಿನ ನಾಯಕತ್ವ ಹೇಳಿದಂತೆ ಡಾಂಗೆ ಕಂಪೆನಿ ಇದನ್ನು ಭಾರತಕ್ಕೆ ಅನ್ವಯಿಸಲು ಪ್ರಯತ್ನಿಸಿತು. ವಿಜಯವಾಡದಲ್ಲಿ ನಡೆದ ಪಕ್ಷದ 6ನೇ ಅಧಿವೇಶನದಲ್ಲಿ ಹಾಜರಿದ್ದ ಸಿ. ಪಿ. ಎಸ್. ಯು. ಪಾಲಿಟ್ ಬ್ಯೂರೋ ಸದಸ್ಯ ಸುಸ್ಲೋವ್ ಅವರು ಅವಿಭಜಿತ ಸಿ. ಪಿ. ಐ. ನ ಪ್ರಧಾನ ಕಾರ್ಯದರ್ಶಿ ಕಾಂ. ಅಜಯ್ ಘೋಷ್‌ರವರನ್ನು ಅಧಿಕೃತ ಕರಡಿನಲ್ಲಿ "ರಾಷ್ಟ್ರೀಯ ಪ್ರಜಾಪ್ರಭುತ್ವದ ಪರಿ

ವಿ. ಜೆ. ಕೆ. ನಾಯರ್

ಕಲ್ಪನೆ"ಯನ್ನು ಸೇರಿಸುವಂತೆ ಒತ್ತಾಯ ಮಾಡಿದ್ದರೆಂದು ವರದಿಯಾಗಿದೆ. ಸುಸ್ಲೋವ್‌ರ ಇಷ್ಟಕ್ಕೆ ವಿರುದ್ಧವಾಗಿದ್ದ ನಮ್ಮ ಪಕ್ಷದ ಕಾರ್ಯಕ್ರಮದ ಯಶಸ್ಸನ್ನು ವಿಜಯವಾಡಾದ ನಮ್ಮ 11ನೇ ಅಧಿವೇಶನದ ಕೊನೆಯಲ್ಲಿ ಸಾರುವ ಹೊತ್ತಿಗೇ ಅದೇ ಅಧಿವೇಶನದಲ್ಲಿ ಅವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸಬೇಕಾಗಿ ಬಂದದ್ದು ಕೇವಲ ಆಕಸ್ಮಿಕ. ಆದರೆ 'ರಾಷ್ಟ್ರೀಯ ಬೂರ್ಜ್ವಾ ವರ್ಗದ ಯಶಸ್ವೀ ನಾಯಕಿ'ಯಾದ ಇಂದಿರಾ ಗಾಂಧಿಯವರೊಡನೆ ಸರಕಾರದ ತಮ್ಮ ಮಾರ್ಗಕ್ಕೆ ಎಡೆಬಿಡದೆ ಅತುಗೊಂಡಿದ್ದಕ್ಕಾಗಿ ಸಿ. ಪಿ. ಐ. ಯಿಂದ ಉಚ್ಚಾಟನೆಗೊಂಡ ಆ ಪಕ್ಷದ ಮಾಜೀ ಅಧ್ಯಕ್ಷ ಶ್ರೀ ಎಸ್. ಎ. ಡಾಂಗೆಯವರಿಗೆ ಈ ರೀತಿ ಪಕ್ಷದ ಶಿಸ್ತನ್ನು ಮುರಿದುದಕ್ಕಾಗಿ ಆ ಅವಧಿಯಲ್ಲಿ ಸೋವಿಯತ್ ಒಕ್ಕೂಟ ವೀಸಾ ನಿರಾಕರಿಸಿದ್ದು ಕೇವಲ ಆಕಸ್ಮಿಕವೇನಲ್ಲ.

ಭಾರತದ ಬೂರ್ಜ್ವಾ ವರ್ಗ

ಈ ಹಿಂದೆ ವಸಾಹತುವಾಗಿದ್ದ ಒಂದು ದೇಶದಲ್ಲಿನ ಸರ್ಕಾರದ ಬಗ್ಗೆ ಕಾರ್ಮಿಕ ವರ್ಗದ ನಿಲುವನ್ನು ನಿರ್ಧರಿಸಲು ಆ ದೇಶದ ಪ್ರಭುತ್ವದ ವರ್ಗ ಚಾರಿತ್ರ್ಯದ ಸರಿಯಾದ ತಿಳುವಳಿಕೆ ಅಗತ್ಯ. ಭಾರತದಲ್ಲಿ ಬೆಳವಣಿಗೆ ಹೊಂದಿದ್ದ ಒಂದು ಬೂರ್ಜ್ವಾ ವರ್ಗವಿತ್ತು. ಅದು ಸ್ವಾತಂತ್ರ್ಯ ಹೋರಾಟದ ನೇತೃತ್ವ ವಹಿಸಿತ್ತು. ಬ್ರಿಟಿಷ್ ಸಾಮ್ರಾಜ್ಯಶಾಹಿಗಳಾದ ಅಧಿಕಾರದ ಹಸ್ತಾಂತರ ಪಡೆಯಲು ಸಫಲವಾದ ಆ ವರ್ಗ ಬೇರೆ ಯಾವುದೇ ವಸಾಹತು ದೇಶದ ಬೂರ್ಜ್ವಾ ವರ್ಗಕ್ಕಿಂತ ಹೆಚ್ಚು ಬಲಿಷ್ಠವಾಗಿ ಬೆಳೆದಿತ್ತು.

ಭಾರತದಲ್ಲಿ ಕೈಗಾರಿಕೆಯ ಬೆಳವಣಿಗೆಯು ಒಂದು ದೀರ್ಘ ಇತಿಹಾಸವಿದೆ. ಬಂಡವಾಳಶಾಹೀ ವ್ಯವಸ್ಥೆಯಲ್ಲಿ ಅಲ್ಲವಾದರೂ, ಈ ದೇಶದಲ್ಲಿ ಮೊಘಲ್ ಸಮ್ರಾಟರು ಹಾಗೂ ರಾಜರು ನಡೆಸುತ್ತಿದ್ದ ದೊಡ್ಡ ಕಾರ್ಖಾನೆಗಳಿದ್ದವು. ಅವರ ದೊಡ್ಡ ದೊಡ್ಡ ಸೈನ್ಯಗಳಿಗೆ ಮತ್ತು ಅದೇ ಕಾಲದಲ್ಲಿ ಅವರ ವಿಶಾಲ ಅಂತಃಪುರಗಳಿಗೆ ಬೇಕಾದ ಸರಕುಗಳನ್ನು ಈ ಕಾರ್ಖಾನೆಗಳು ಉತ್ಪಾದಿಸುತ್ತಿದ್ದವು. ಇದರೊಂದಿಗೇ ಅನುಪಮ ಮಸ್ಲಿನ್ ಬಟ್ಟೆ, ಕ್ಯಾಲಿಕೊ ಹಾಗೂ ಯುರೋಪಿನ ಶ್ರೀಮಂತರು ಬಹಳ ಇಷ್ಟಪಡುವ ಇತರ ವಸ್ತುಗಳನ್ನು ಉತ್ಪಾದಿಸುವ ಕುಶಲ ಕರ್ಮಿಗಳ ಒಂದು ದೊಡ್ಡ ಸಮೂದಾಯವಿತ್ತು. ಈ ರೀತಿ ಈ ಹಂತದಲ್ಲೇ ಊಳಿಗ ಮಾನ್ಯ ಪ್ರಭುಗಳಲ್ಲದೆ, ವ್ಯಾಪಾರೀ ರಾಜಕುಮಾರರು ಹಾಗೂ, ಇತರ ಹಲವು ಶೋಷಕ ವರ್ಗಗಳು ಭಾರತದಲ್ಲಿದ್ದವು.

ಈ ಊಳಿಗಮಾನ್ಯ ಸಾಮ್ರಾಜ್ಯದಲ್ಲಿ ಬಿರುಕು ಕಂಡು ಬಂದಿತ್ತು. ಹಲವು ಅಂತಃಕಲಹಗಳು ಈ ಸಮಯದಲ್ಲಿ ನಡೆದಿದ್ದವು. ಈ ಪಾಳೆಗಾರೀ ಯುದ್ಧಗಳ ಕೊನೆಯ ಹಂತಗಳಲ್ಲಿ ಯುರೋಪಿಯನ್ ಶಕ್ತಿಗಳು ಇದರಲ್ಲಿ ಸೇರಿಕೊಂಡವು ತನ್ನ ದೇಶದಲ್ಲಿ ಉದಯಿಸುತ್ತಿದ್ದ ಬೂರ್ಜ್ವಾ ವರ್ಗದ ಪ್ರತಿನಿಧಿಯಾದ ಬ್ರಿಟಿಶ್ ಈಸ್ಟ್ ಇಂಡಿಯಾ ಕಂಪನಿ ಒಂದೆಡೆ ದೇಶದ ಹೊಸ ಆಳರಸರಾದರು. ಇನ್ನೊಂದೆಡೆಯಲ್ಲಿ ಒಂದಿಲ್ಲೊಂದು ಊಳಿಗಮಾನ್ಯ ಪ್ರಭುವಿನೊಡನೆ ಕೂಡಿಕೊಂಡು ಕ್ರಮೇಣ ಒಂದು ಪ್ರಭುತ್ವಯಂತ್ರವನ್ನು ರಚಿಸಿದರು. ಈ ಪ್ರಭುತ್ವ ಯಂತ್ರ ವಾಸ್ತವದಲ್ಲಿ ಕಾರ್ಯ ನಿರ್ವಹಿಸಿದ್ದು ರಾಷ್ಟ್ರೀಯ ಆರ್ಥಿಕತೆಯನ್ನು ಅಭಿವೃದ್ಧಿ ಪಡಿಸಲಿಕ್ಕಾಗಲಿಲ್ಲ ಬದಲಾಗಿ, ಅದು ಭಾರತವನ್ನು ಇಂಗ್ಲೆಂಡಿನ ಬೆಳೆಯುತ್ತಿದ್ದ ಕೈಗಾರಿಕಾ ಜಗತ್ತಿನ ಹಿತ್ತಲನ್ನಾಗಿ ಮಾಡಿತು.

ಆದರೆ ಕ್ರಮೇಣ ರೈಲ್ವೆ, ಹಡಗು ಕಟ್ಟೆ, ಬಂದರು, ಟೆಲಿಗ್ರಾಫ್, ನಾಗರಿಕ ಸೇವೆ, ಭಾರತೀಯ ಸೇನೆ ಇತ್ಯಾದಿಗಳಲ್ಲಿ ಹಣ ತೊಡಗಿಸಿ ಅವರು ಬೆಳೆಸಿದ ಅಂತರ್‌ರಚನೆ 19ನೇ ಶತಮಾನದಲ್ಲೇ ಒಂದು ಹೊಸ ರೀತಿಯ ಕೈಗಾರಿಕೆಯ ಬೆಳವಣಿಗೆಗೆ ಕಾರಣವಾಯಿತು. ಇದಕ್ಕೆ ಪೂರಕವಾಗಿ, ಈ ಕೈಗಾರಿಕೆಗಳು ಎರಡು ಜಾಗತಿಕ ಯುದ್ಧಗಳ ಸಮಯದಲ್ಲಿ ಉಚ್ಛ್ರಾಯ ಸ್ಥಿತಿಗೇರಿದವು. ಈ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸಿದ ಬ್ರಿಟಿಷ್ ಬಂಡವಾಳ ಹಾಗೂ ಭಾರತೀಯ ಬಂಡವಾಳ ಸ್ವಾಭಾವಿಕವಾಗಿಯೇ ಒಂದು ಬೂರ್ಜ್ವಾ ವರ್ಗವನ್ನು ಬೆಳೆಸಿದವು. ಇದರ ಚಾರಿತ್ರ್ಯ ಕೇವಲ ಬ್ರಿಟಿಷ್ ಬಂಡವಾಳದ ಸೇವಕ ಸ್ವರೂಪದ್ದು ಮಾತ್ರವಾಗಿರಲಿಲ್ಲ. ಸಾಕಷ್ಟು ಬೆಳೆದಿದ್ದ ಈ ಬೂರ್ಜ್ವಾ ವರ್ಗವೇ ಸ್ವಾತಂತ್ರ್ಯ ಹೋರಾಟದ ನೇತೃತ್ವವಹಿಸಿ ವಸಾಹತುಶಾಹೀ ಸಾಧನದ ವಾರಸುದಾರನಾಯಿತು.

ಡಾಂಗೆ ಕಂಪೆನಿಯ ಮೂರ್ಖತನ

ಹೊಸ ಯುಗದಲ್ಲಿ ಈ ಬೂರ್ಜ್ವಾ ವರ್ಗಹಾಗೂ ಸಾಮ್ರಾಜ್ಯಶಾಹಿ ನಡುವೆ ವೈರುಧ್ಯ ಬೆಳೆಯಿತು. ಯಾಕೆಂದರೆ ಈ ಬೂರ್ಜ್ವಾ ವರ್ಗಕ್ಕೆ ಭಾರತವನ್ನು ಕೇವಲ ತನ್ನದೇ ಪ್ರಭಾವ ವಲಯವಾಗಿ ಇಟ್ಟುಕೊಳ್ಳಬೇಕಾಗಿತ್ತು. ಆದ್ದರಿಂದ ಈ ಉದ್ದೇಶ ಸಾಧನೆಗಾಗಿ ತಾನು ಹೊಸದಾಗಿ ಪಡೆದ ಪ್ರಭುತ್ವವನ್ನು ಅದು ಉಪಯೋಗಿಸಿತು. ಇದಕ್ಕಾಗಿ ಸಾಮ್ರಾಜ್ಯಶಾಹೀ ದೇಶಗಳಿಗೆ ವಿರುದ್ಧವಾಗಿದ್ದ ಹೆಚ್ಚಿನ ದೇಶಗಳಲ್ಲಿ ಕಾರ್ಮಿಕ ವರ್ಗವೂ ಸೇರಿದಂತೆ ಎಲ್ಲಾ ವರ್ಗಗಳ ಬೆಂಬಲ ಪಡೆಯಲು ಅದು ಸಿದ್ಧವಿತ್ತು. ಆದರೆ ಇನ್ನೊಂದೆಡೆ ಈ ವರ್ಗಕ್ಕೆ ವೈರಿಗಳೂ ಇದ್ದರು.ಗಡಿಗಳಾಚೆಗೆ ಸಮಾಜವಾದೀ ಶಿಬಿರವಿದ್ದರೆ ಗಡಿಯೊಳಗೆ ಕಾರ್ಮಿಕ ವರ್ಗವಿತ್ತು, ಇದು ಅವರ ಸಮಾಧಿ ತೋಡುವ ವರ್ಗವಾಗಿ ಬೆಳೆಯುತ್ತಿದೆ.

ರಾಷ್ಟ್ರೀಯ ಬೂರ್ಜ್ವಾ ವರ್ಗಕ್ಕೆ ಸಾಮ್ರಾಜ್ಯಶಾಹಿಗಳೊಡನೆ ಇದ್ದ ವೈರುಧ್ಯವನ್ನು ಮಾತ್ರ ಗಣನೆಗೆತೆಗೆದುಕೊಂಡು ಉಳಿದ ವೈರುಧ್ಯಗಳನ್ನು ಉಪೇಕ್ಷಿಸಿದ್ದು ಡಾಂಗೆ ಕಂಪೆನಿಯ ಮೂರ್ಖತನದ ಪರಮಾವಧಿ. ವಾಸ್ತವದಲ್ಲಿ ರಾಷ್ಟ್ರೀಯ ಗಡಿಗಳ ಒಳಗೆಯೆ ಇರುವ ಶೋಷಿತ ವರ್ಗಗಳು ಒಂದೆಡೆ ಆಳುವ ವರ್ಗಗಳು ತಮ್ಮ ಮೇಲೆ ಹಾಗೂ ಸಮಾಜವಾದೀ ಶಿಬಿರದ ಮೇಲೆ ನಡೆಸುವ ದಾಳಿಗಳ ವಿರುದ್ಧ ಹೋರಾಡಬೇಕು. ಇನ್ನೊಂದೆಡೆ ಆಳುವ ವರ್ಗಗಳು ಸಾಮ್ರಾಜ್ಯಶಾಹಿಗಳ ವಿರುದ್ಧ ಹೋರಾಡುವಂತೆ ಹಾಗೂ ಸಮಾಜವಾದೀ ಶಿಬಿರದೊಡನೆ ಸಹಕರಿಸುವಂತೆ ಪ್ರೋತ್ಸಾಹಿಸಬೇಕು. ಸರಿಯಾದ ಅಂತರ್‌ರಾಷ್ಟ್ರೀಯ ನಿಲುವಿನ ಯಶಸ್ಸು ಇದರಲ್ಲೇ ಅಡಗಿರುವುದು.

ಸೋವಿಯೆತ್ ಒಕ್ಕೂಟದ ಈ ನಾಯಕತ್ವ ತನ್ನ ಪರಿಷ್ಕರಣವಾದೀ ವಿಚಾರಗಳಿಂದಾಗಿ ಭಾರತದಲ್ಲಿ ಆಳುವ ವರ್ಗಗಳೊಂದಿಗೆ ಕೈ ಮಿಲಾಯಿಸಿದವರಿಗೆ ಬೆಂಬಲ ನೀಡಿತು. ಇವರ ಬಲದಿಂದಲೇ ಡಾಂಗೆ ಕಂಪೆನಿ 'ರಾಷ್ಟ್ರೀಯ ಪ್ರಜಾಪ್ರಭುತ್ವವಾದೀ ಮಾರ್ಗ' ಎನ್ನಲಾದ ತನ್ನ ಮಾರ್ಗವನ್ನು ಪರಿಪೂರ್ಣಗೊಳಿಸಿ ಅವರ ಪಕ್ಷ ಭಾಟಿಂಡಾ ಅಧಿವೇಶನದಲ್ಲಿ ತನ್ನ ಪಥವನ್ನು ಬದಲಿಸಲು ನಿರ್ಧರಿಸುವ ಸಮಯಕ್ಕೆ ಪಕ್ವವನ್ನೇ ಇಲ್ಲವಾ

(6ನೇ ಪುಟ ನೋಡಿ)

ಪಕ್ಷ ಸಂಯುಕ್ತರಂಗ ಹಾಗೂ ಜನತೆ

ಪಶ್ಚಿಮ ಬಂಗಾಳದ ಮೂರು ದಶಕಗಳ ಹೋರಾಟದ ಅನುಭವ

........ಜ್ಯೋತಿಬಸು

ನಾವು ರಾಜ್ಯದ ಅತೀ ದೊಡ್ಡ ರಾಜಕೀಯ ಶಕ್ತಿ ಹಾಗೂ ಎಡರಂಗದ ಪ್ರಮುಖ ಅಂಗವಾಗಿರುವುದು ನಮ್ಮ ಪಕ್ಷದ ಮೇಲೆ ಕೆಲವು ಜವಾಬ್ದಾರಿಗಳನ್ನು ಹೊರಿಸಿದೆ. ಮೊದಲನೆಯದು ನಾವು ಜನತೆಯೊಡನೆ ದಿನನಿತ್ಯ ಸಂಪರ್ಕ ಇಟ್ಟುಕೊಳ್ಳಬೇಕು; ಅವರಿಂದ ದೂರವಾಗುವ ಕೆಲಸ ಮಾಡಬಾರದು. ನಾವು ಹೋರಾಟಗಳಲ್ಲಿ ತೋರಿಸುವ ಧೈರ್ಯ, ಸ್ಥೈರ್ಯ, ದೃಢ ನಿರ್ಧಾರದೊಂದಿಗೆ ನಮ್ಮ ವೈಯಕ್ತಿಕ ಜೀವನದಲ್ಲಿ ಪ್ರಾಮಾಣಿಕತೆ ಹಾಗೂ ಜನತೆಯ ಬಗ್ಗೆ ತೀವ್ರ ಆತಂಕ ಇವೂ ಸೇರಿರಬೇಕು.

ಎರಡನೆಯದಾಗಿ, ನಾವು ಎಷ್ಟೇ ಬಲಶಾಲಿಗಳಾದರೂ ನಮ್ಮ ಶಕ್ತಿಯನ್ನು ಉತ್ಪ್ರೇಕ್ಷೆಗೊಳಿಸಿಕೊಳ್ಳಬಾರದು. ಕಾಂಗ್ರೆಸ್ ಪಕ್ಷ ಹಾಗೂ ಪ್ರತಿಕ್ರಿಯಾವಾದೀ ಶಕ್ತಿಗಳು ಪಶ್ಚಿಮ ಬಂಗಾಳದಿಂದ ಸಂಪೂರ್ಣವಾಗಿ ತೊಲಗಿಲ್ಲ. ನಾವು ಇಲ್ಲಿ ಅಧಿಕಾರದಲ್ಲಿದ್ದರೂ ಬೂರ್ಜ್ವಾ–ಭೂಮಾಲಿಕ ಆಳ್ವಿಕೆ ಮುಂದುವರಿಯುತ್ತಿದೆ. ಕಾಂಗ್ರೆಸ್ (ಐ) ನ ಅಂತರಿಕ ಕಚ್ಚಾಟ, ಅದರ ಸಮಾಜ ಘಾತಕ, ಹಿಂಸಾತ್ಮಕ ಸ್ವರೂಪ ಏನೇ ಇದ್ದರೂ ವಿವಿಧ ಕಾರಣಗಳಿಗಾಗಿ ಪಶ್ಚಿಮ ಬಂಗಾಳದ ಮೂರರಲ್ಲಿ ಒಂದು ಭಾಗ ಜನತೆ ಅದಕ್ಕೆ ಬೆಂಬಲ ಮುಂದುವರೆಸುತ್ತಿದ್ದಾರೆ. ಇಂತಹ ಬೆಂಬಲಿಗರಲ್ಲಿ ಕೆಲವರಷ್ಟೇ ಶ್ರೀಮಂತರು, ಉಳಿದ ಬಡವ, ಮಧ್ಯಮ ವರ್ಗದ ಅವರ ಬೆಂಬಲಿಗರ ಬಗ್ಗೆ ನಮ್ಮ ನಿಲುವು ಏನಿರಬೇಕು? ನಾವು ಪಂಥವಾದೀ ದೃಷ್ಟಿಯಿಂದ ಅವರನ್ನೆಲ್ಲಾ ನಮ್ಮ ಶತ್ರುಗಳೆಂದು ಭಾವಿಸಿದರೆ ಅವರನ್ನು ಎಂದೂ ನಮ್ಮ ಕಡೆಗೆ ಗೆದ್ದುಕೊಳ್ಳಲು ಸಾಧ್ಯವಿಲ್ಲ. ಬದಲಾಗಿ ಅವರು ನಮ್ಮ ಬಗ್ಗೆ ಎಷ್ಟೇ ಶತ್ರುತ್ವ ಹೊಂದಿದ್ದರೂ, ಅವರೂ ನಮ್ಮ ವರ್ಗ ಮಿತ್ರರು ಎಂಬ ವಾಸ್ತವತೆಯನ್ನು ಸ್ವೀಕರಿಸಿ ಅವರೊಂದಿಗೆ ಸಂಪರ್ಕ ಇಟ್ಟುಕೊಂಡರೆ ಅವರಲ್ಲಿ ಹಲವರು ತಮ್ಮ ತಪ್ಪನ್ನು ತಿದ್ದಿಕೊಂಡು ನಮ್ಮ ಕಡೆಗೆ ಬರುತ್ತಾರೆ ಎಂಬ ಭರವಸೆ ನನಗಿದೆ.

ಸರ್ಕಾರೀ ನೌಕರರು

ಮೂರನೆಯದಾಗಿ, ನಾವು ಸರ್ಕಾರದಲ್ಲಿದ್ದು ಜನಪರ ಧೋರಣೆಗಳನ್ನು ಜ್ಯಾರಿಗೊಳಿಸಲು ಪ್ರಯತ್ನಿಸುತ್ತಿದ್ದರೂ ಅದನ್ನು ಜ್ಯಾರಿಗೊಳಿಸುವ ಸಾಧನ-ವಿಶೇಷವಾಗಿ, ಆಡಳಿತ ಹಾಗೂ ಪೋಲೀಸ್‌ನ ಒಂದು ವಿಭಾಗ–ಈ ಜನಪರ ಧೋರಣೆಗಳಿಗೆ ವಿರುದ್ಧವಾಗಿದೆ. ವರ್ಷಾನುಗಟ್ಟಲೆಯಿಂದ ಬೆಳೆಸಿದ ದ್ವೇಷವನ್ನು ಇವರಲ್ಲಿ ಕೆಲವರು ಕಳೆದ ನಾಲ್ಕೂವರೆ ವರ್ಷಗಳ ಅನುಭವದ ನಂತರ ಬಿಟ್ಟುಕೊಟ್ಟಿದ್ದಾರೆ ಎಂಬುದು ನಿಜ. ಆದರೆ ಉಳಿದ ಈ ವಿಭಾಗದವರ ನೇರ ಹಾಗೂ ಮುಸುಕಿನ ವಿರೋಧ ನಮ್ಮ ಕಾರ್ಯಕ್ರಮ ಜ್ಯಾರಿಗೊಳಿಸುವಲ್ಲಿ ಒಂದು ತಡೆ. 1980ರ ಲೋಕಸಭಾ ಚುನಾವಣೆಯಿಂದ ಕೇಂದ್ರ ಸರ್ಕಾರದಲ್ಲಿ ಬದಲಾವಣೆಯಾದ ನಂತರ ಕೆಲವು ಮೇಲ್ಮಟ್ಟದ ಅಧಿಕಾರಿಗಳು ಕಾಂಗ್ರೆಸ್ (ಐ) ಸರ್ಕಾರ ಹಾಗೂ ಆಡಳಿತದೊಂದಿಗೆ ತಮ್ಮ ಹಳೆಯ ಸಂಬಂಧವನ್ನು ಮತ್ತೆ ಸ್ಥಾಪಿಸಲು ಪ್ರಯತ್ನಿಸುತ್ತಿದ್ದಾರೆ.

ಇಂತಹ ಸಂದರ್ಭದಲ್ಲಿ, ಬಹುಸಂಖ್ಯೆಯಲ್ಲಿ ಸರ್ಕಾರದ ಬೆಂಬಲಿಗರಾದ ಕೆಳ ಹಂತದ ಸರ್ಕಾರೀ ನೌಕರರ ಕೆಲಸ ಬಹಳ ಮಹತ್ವದ್ದು. ಈ ಹಿಂದೆ ಹಲವು ಪ್ರಮುಖ ಸಂದರ್ಭಗಳಲ್ಲಿ ಎಡರಂಗ ಹಾಗೂ ಸರ್ಕಾರದ ಬೆಂಬಲವಾಗಿ ಸಕ್ರಿಯವಾಗಿ ಇವರು ದುಡಿದಿದ್ದಾರೆ. ಅದೇ ರೀತಿ ಅವರ ದಿನನಿತ್ಯದ ಕೆಲಸದಲ್ಲೂ ಹೊಣೆಗಾರಿಕೆತನವನ್ನು ಉನ್ನತ ರಾಜಕೀಯ ಪ್ರತಿಜ್ಞೆಯನ್ನೂ ಅವರು ತೋರಿಸಿಕೊಡುತ್ತಾರೆಂಬ ಭರವಸೆ ನನಗಿದೆ. ಸರ್ಕಾರ ಸರಿಯಾಗಿ ಕಾರ್ಯ ನಿರ್ವಹಿಸಿದರೆ, ಜನತೆ ಅವರಿವರ ಸಹಾಯ ಪಡೆಯದೇ ಸರಿಯಾಗಿ ಸೇವೆ ಪಡೆಯುವಂತಾದರೆ ಎಡರಂಗ ಸರ್ಕಾರ ಮಾತ್ರವಲ್ಲ ನೌಕರರೂ ಜನತೆಯ ಪ್ರೀತಿ, ಆದರ ಗಳಿಸುತ್ತಾರೆ.

ಪ್ರಯತ್ನಗಳೂ ನಡೆಯುತ್ತಿವೆ ಜೂನ್ 1977 ರ ಚುನಾವಣೆಯ ನಂತರ ಕತ್ತಲಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಮಾಜಘಾತಕ ಶಕ್ತಿಗಳು, 1980 ರ ಚುನಾವಣೆಯಲ್ಲಿ ಇಂದಿರಾ ಗಾಂಧಿಯ ವಿಜಯದ ನಂತರ ಮತ್ತೆ ತಮ್ಮ ಹೊಲಸು ತಲೆಯೆತ್ತುತ್ತಿದ್ದಾರೆ. ಕಾಂಗ್ರೆಸ್ (ಐ) ಗೂಂಡಾಗಳು ನಮ್ಮ ಮೇಲೆ ಧಾಳಿ ಮಾಡುತ್ತಿದ್ದಾರೆ ಮಾತ್ರವಲ್ಲ ಅವರವರೇ ಒಬ್ಬರನ್ನೊಬ್ಬರು ಕೊಂದುಕೊಳ್ಳುತ್ತಿದ್ದಾರೆ. ಈ ಕಚ್ಚಾಡುವ ಗುಂಪುಗಳನ್ನು ಎಡರಂಗ ಸರ್ಕಾರದ ವಿರುದ್ಧ ಒಂದುಗೂಡಿಸುವ ಪ್ರಯತ್ನಗಳು ನಡೆಯುತ್ತಿವೆ.

ಎಚ್ಚರಿಕೆ ಅಗತ್ಯ

ಪಶ್ಚಿಮ ಬಂಗಾಳದ ಎಡರಂಗ ಸರ್ಕಾರ ಕೇಂದ್ರ ಸರ್ಕಾರದ ಆಶೀರ್ವಾದದಿಂದೇನೂ ರಚಿತಗೊಂಡಿಲ್ಲ. ಅದನ್ನು ಸೃಷ್ಟಿಸಿದವರು ರಾಜ್ಯದ ಜನ.

ಪಶ್ಚಿಮ ಬಂಗಾಲದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ದೀರ್ಘ ಪ್ರಯತ್ನ, ಅವಿರತ ಹೋರಾಟಗಳಿಂದ ಜನಮನದಲ್ಲಿ ಆಳವಾಗಿ ಬೇರೂರಿದೆ. ಈ ಬೆಳವಣಿಗೆ ಕುರಿತಾಗಿ ಪ.ಬಂಗಾಲದ ಮುಖ್ಯಮಂತ್ರಿ ಮತ್ತು ಸಿಪಿಐ (ಎಂ) ಪೊಲಿಟ್‌ಬ್ಯೂರೋ ಸದಸ್ಯ ಕಾಂ| ಜ್ಯೋತಿ ಬಸು ಅವರ ಲೇಖನ ಪ್ರಕಟಿಸಿದ್ದೇವೆ.

ಕಳೆದ ವಾರ (7–3–82) ಸ್ಥಳಾಭಾವದಿಂದ ಈ ಲೇಖನ ಪ್ರಕಟವಾಗಿರಲಿಲ್ಲ. ಕಾಂ| ಜ್ಯೋತಿ ಬಸು ಅವರ ಲೇಖನದ ಕೊನೆಯ ಕಂತನ್ನು ಈ ಸಂಚಿಕೆಯಲ್ಲಿ ಪ್ರಕಟಿಸುತ್ತಿದ್ದೇವೆ.

ಕೇಂದ್ರದ ಪಿತೂರಿಗಳು

ನಾಲ್ಕನೆಯದಾಗಿ, ಎಡರಂಗ ಸರ್ಕಾರವನ್ನು ಅಸ್ಥಿರಗೊಳಿಸಿ, ಅದರ ಆರ್ಥಿಕ ಸ್ಥಿತಿಯನ್ನು ದುರ್ಬಲಗೊಳಿಸಲು ಕೇಂದ್ರದಲ್ಲಿನ ಸರಕಾರ ಹಾಗೂ ಆಳುವ ಪಕ್ಷದ ನಾಯಕತ್ವ ಪಿತೂರಿಗಳನ್ನು ನಡೆಸುತ್ತಿವೆ ಎಂಬುದನ್ನು ನೆನಪಿನಲ್ಲಿಡಬೇಕು. ಪಶ್ಚಿಮ ಬಂಗಾಳದಲ್ಲಿ ಅತ್ಯಂತ ಯಶಸ್ವಿಯಾದ 'ಕೂಲಿಗಾಗಿ ಕಾಳು' ಯೋಜನೆ ಗೋಧಿಯ ಪೂರೈಕೆಯಿಲ್ಲದೆ ನಿಂತುಹೋಗುವಲ್ಲಿ, ಕೈಗಾರಿಕಾ ಲೈಸೆನ್ಸ್ ಕೊಡದಿರುವಲ್ಲಿ ಹೊಸ ಕೈಗಾರಿಕಾ ಘಟಕಗಳನ್ನು ಸ್ಥಾಪಿಸದಿರುವಲ್ಲಿ, ಸಾವಿರಾರು ಕಾರ್ಮಿಕರಿರುವ ದೊಡ್ಡ ಕೈಗಾರಿಕೆಗಳನ್ನು ರಾಷ್ಟ್ರೀಕರಿಸುವಲ್ಲಿ ವಿಳಂಬವಾಗಲು ಕೇಂದ್ರದ ರಾಜಕೀಯವೂ ಕಾರಣ.

ಅದೇ ಸಮಯದಲ್ಲಿ ಕಾನೂನು ವ್ಯವಸ್ಥೆಯನ್ನು ಭಂಗಗೊಳಿಸುವ ಮುಂದಿನ ಚುನಾವಣೆ ನಡೆಯುವವರೆಗೆ ಎಲ್ಲಾ ಜನ ವಿಭಾಗಗಳೂ ಕೇಂದ್ರ ಸರ್ಕಾರದ ಪಿತೂರಿಗಳ ಬಗ್ಗೆ ಎಚ್ಚರದಿಂದಿರಬೇಕು. ಮುಂದಿನ ಹೋರಾಟಗಳಿಗೆ ತಯಾರಾಗಿರಲು ಅವರಿಗೆ ಅನುಕೂಲವಾಗುವಂತೆ ತರಬೇತಿ ಶಿಬಿರಗಳನ್ನು ಹಾಗೂ ಆಂದೋಲನಗಳನ್ನು ನಡೆಸಿ ಅವರ ಪ್ರಜ್ಞೆಯ ಮಟ್ಟವನ್ನು ಎತ್ತರಿಸಬೇಕು.

ಈಗಿನ ವ್ಯವಸ್ಥೆಯಲ್ಲಿ ನಿರುದ್ಯೋಗ, ಹಣದುಬ್ಬರ, ಅಸಮಾನತೆ, ವರ್ಗ ಶೋಷಣೆ ಮುಂತಾದ ಮೂಲಭೂತ ಸಮಸ್ಯೆಗಳನ್ನು ಪರಿಹರಿಸುವುದು ಸಾಧ್ಯವಿಲ್ಲ. ಆದ್ದರಿಂದ ಎಡರಂಗ ಸರ್ಕಾರವಿದ್ದರೂ ವರ್ಗ ಆಧಾರಿತ ಹೋರಾಟಗಳ ಅಗತ್ಯ ಇದ್ದೇ ಇದೆ. ಈಗಿರುವ ಸ್ಥಿತಿಯ ಗರಿಷ್ಠ ಲಾಭ ಪಡೆದು ವರ್ಗ ಆಧಾರಿತ ಸಂಘಟನೆಗಳನ್ನು ಹಾಗೂ ಚಳವಳಿಗಳನ್ನು ಬಲಪಡಿಸಬೇಕು. ಅದೇ ಸಮಯದಲ್ಲಿ ಸಾಧ್ಯವಾದಷ್ಟು ಉದ್ಯೋಗ ಕಲ್ಪಿಸಲು, ಉತ್ಪಾದನೆ ಹೆಚ್ಚಿಸಲು ಹಾಗೂ ಜನರ ಜೀವನಸ್ಥಿತಿಯನ್ನು ಸುಧಾರಿಸಲು ಪ್ರಯತ್ನಿಸಬೇಕು. ಇದಕ್ಕಾಗಿ ಸ್ವಾರ್ಥಪರ ಹಾಗೂ ಗುಂಪು ಹಿತಾಸಕ್ತಿಗಳನ್ನು, ಸರ್ಕಾರದ ಅವಲಂಬನೆ ಇವುಗಳ ಬದಲಿಗೆ ಸ್ವಾವಲಂಬನೆ ಹಾಗೂ ಕೆಲಸದಲ್ಲಿ ಸಾಮುದಾಯಿಕ ಭಾಗವಹಿಸುವಿಕೆ ಇರಬೇಕು.

ಅಂತಿಮ ಗುರಿ

ಐದನೆಯದಾಗಿ, ರಾಜ್ಯ ಸರ್ಕಾರ ರಚಿಸುವುದರಿಂದ ನಮ್ಮ ಅಂತಿಮ ಗುರಿ ತಲುಪಿಸಿದ್ದೇವೆಂಬ ತೃಪ್ತಿಭಾವನೆ ಬೇಡ. ಚುನಾವಣೆಗಳಲ್ಲಿ ಸರ್ಕಾರ ನಡೆಸುವುದರಲ್ಲಿ ನಮ್ಮ ಯಶಸ್ಸಿನ ಬಗ್ಗೆ ಹೆಮ್ಮೆ ಪಟ್ಟುಕೊಳ್ಳಬಹುದಾದರೂ ನಮ್ಮ ಅಂತಿಮ ಗುರಿ ರಾಷ್ಟ್ರೀಯ ಮಟ್ಟದಲ್ಲಿ ಅಧಿಕಾರ ವಹಿಸಿಕೊಳ್ಳುವುದು ಎಂಬುದನ್ನು ಮರೆಯಬಾರದು.

ಪಶ್ಚಿಮ ಬಂಗಾಳ, ಹಾಗೂ ತ್ರಿಪುರಾ ಎಡನೇತೃತ್ವದ ಸರ್ಕಾರಗಳು ಬಂಡವಾಳಶಾಹೀ–ಭೂಮಾಲಿಕ ಆಧಿಪತ್ಯದ ಭ್ರಷ್ಟ ಕಾಂಗ್ರೆಸ್ ಆಡಳಿತಗಳಿಗೆ ಪರ್ಯಾಯವಾದ ಒಂದು ದಾರಿಯನ್ನು ತೋರಿಸಿಕೊಟ್ಟು ಬೇರೆ ರಾಜ್ಯಗಳ ಹೋರಾಟಗಾರ ಕಾರ್ಮಿಕರು ಹಾಗೂ ರೈತರಿಗೆ ಪ್ರೇರಣೆ ನೀಡಿದೆ. ನಮ್ಮ ಸೈದ್ಧಾಂತಿಕ ನಿಲುವನ್ನು ಕೆಲವೊಮ್ಮೆ ಅವರಿಗೆ ಅರ್ಥಮಾಡಿಕೊಳ್ಳಲಾಗದಿದ್ದರೂ, ನಮ್ಮ ನೀತಿಬದ್ಧತೆ, ಜಾತ್ಯಾತೀಯತೆ, ಸಂಕುಚಿತವಾದಕ್ಕೆ ವಿರೋಧ ಹಾಗೂ ಶಿಸ್ತು ಅವರ ಮೇಲೆ ಪ್ರಭಾವ ಬೀರಿದೆ. ಈ ರಾಷ್ಟ್ರೀಯ ಹಿನ್ನೆಲೆಯಲ್ಲಿ ಪಶ್ಚಿಮ ಬಂಗಾಳದಲ್ಲಿನ ನಮ್ಮ ಕೆಲಸವನ್ನು ಮುಂದುವರಿಸಬೇಕು.

ವರ್ಷಗಳ ಪ್ರಯತ್ನದಿಂದ ಜನಸಾಮಾನ್ಯರ ಬೆಂಬಲ ಹಾಗೂ ಪ್ರೀತಿಯಿಂದ ಪಶ್ಚಿಮ ಬಂಗಾಳದಲ್ಲಿ ನಾವು ಅಜೇಯ ಶಕ್ತಿಯಾಗಿರುವಂತೆ ಭವಿಷ್ಯದಲ್ಲಿ ಸದ್ಯದಲ್ಲೇ ದೇಶದ ಎಲ್ಲಾ ರಾಜ್ಯಗಳ ಜನರನ್ನು ನಮ್ಮೊಡೆಗೆ ಸೆಳೆಯಲು ನಮಗೆ ಸಾಧ್ಯವಾಗುವುದೆಂಬ ಭರವಸೆ ನನಗಿದೆ. ಪ್ರಜಾಪ್ರಭುತ್ವಕ್ಕಾಗಿ ಮಾಡುವ ಹೋರಾಟ ಅವಿಭಾಜ್ಯ. ಎಲ್ಲಾ ಪ್ರಜಾಪ್ರಭುತ್ವವಾದಿ ಜನ ಒಟ್ಟಾಗಿ ನಿಂತು ಸರ್ವಾಧಿಕಾರದ ದಾರಿಗೆ ತಡೆಯೊಡ್ಡಬೇಕು. ●

ಪಕ್ಷದ ಸದಸ್ಯರ, ಹಿತೈಷಿಗಳ ಸಭೆ

11-2-82ರಂದು ಪುತ್ತೂರಿನಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸದಸ್ಯರ ಮತ್ತು ಹಿತೈಷಿಗಳ ಸಭೆ ನಡೆಯಿತು.

ತಾಲ್ಲೂಕು ಮಟ್ಟದ ಈ ಸಭೆಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿ ಕಾರ್ಯದರ್ಶಿ ಕಾಂ| ಎಂ. ಕೆ. ಭಟ್ ಮತ್ತು ದ. ಕ. ಜಿಲ್ಲಾ ಕಾರ್ಯದರ್ಶಿ ಕಾಂ| ಕೆ. ಆರ್. ಶ್ರೀಯಾನ್ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಆರಂಭದಲ್ಲಿ ಕಾಂ| ಬಿ ರಾಮಕೃಷ್ಣ ಸ್ವಾಗತಿಸಿದರು.

ಕಾಂ| ಎಂ. ಕೆ ಮತ್ತು ಕಾಂ| ಶ್ರೀಯಾನ್ ಮಾತನಾಡುತ್ತಾ, ಪಕ್ಷವನ್ನು ಬಲಪಡಿಸುವಂತೆ ಮಾಡಲು ಸಹಕರಿಸಬೇಕೆಂದು ಕರೆಕೊಟ್ಟರು.

ಸರ್ವಸದಸ್ಯರ ಸಭೆ

28-2-82 ರಂದು ಶಿವಮೊಗ್ಗದಲ್ಲಿ ಅಕ್ಕಿ ಗಿರಣಿ ಕೆಲಸಗಾರರ ಮತ್ತು ಹಮಾಲಿ ಕಾರ್ಮಿಕ ಸಂಘದ ಸದಸ್ಯರ ಸಭೆ ನಡೆಯಿತು.

ಈ ಸಭೆಗೆ ಮುನ್ನ ಸಂಘದ ಕಚೇರಿಯಿಂದ ಬೃಹತ್ ಮೆರವಣಿಗೆ ಹೊರಡಿಸಲಾಗಿತ್ತು. ಸಾವಿರಾರು ಕಾರ್ಮಿಕರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಸಾಯಂಕಾಲ ಪ್ರಾರಂಭವಾದ ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಕಾಂ| ಬಿ. ತಿರುಕಪ್ಪನವರು ವಹಿಸಿದ್ದರು. ಶ್ರೀ ಸೋಮಸುಂದರ ಶೆಟ್ಟಿಯವರು ಎಲ್ಲರನ್ನೂ ಸ್ವಾಗತಿಸಿದರು.

ಸಂಘದ ಕಾರ್ಯದರ್ಶಿ ಕಾಂ| ಚಂದು ಕುಟ್ಟಿಯವರು ಸಂಘದ ಚಟುವಟಿಕೆಗಳ ವರದಿಯನ್ನಿತ್ತರು. ವರದಿಯ ಮೇಲಿನ ಚರ್ಚೆಯಲ್ಲಿ ಶಂಕರನಾರಾಯಣ, ಖಾಸಿಂ ಸಾಬ್, ಎಚ್. ನಾಗಪ್ಪ, ಖಾಸಿಂ ಖಾನ್, ಜಯರಾಂ ಮತ್ತು ಬಾಬಾಖಾನ್ ಮೊದಲಾದವರು ಮಾತನಾಡಿದರು.

ಕೊನೆಯಲ್ಲಿ ಈ ಕೆಳಕಂಡವರನ್ನೊಳಗೊಂಡ ಹೊಸ ಕಾರ್ಯಕಾರಿ ಸಮಿತಿಯನ್ನು ಸಭೆ ಚುನಾಯಿಸಿತು ಕಾಂ| ಬಿ. ತಿರುಕಪ್ಪ ಅಧ್ಯಕ್ಷರಾಗಿ, ಚಂದುಕುಟ್ಟಿ ಕಾರ್ಯದರ್ಶಿಯಾಗಿ ಪಿ. ಶಂಕರನಾರಾಯಣ ಉಪಾಧ್ಯಕ್ಷರುಗಳಾಗಿ ಖಾಸಿಂಸಾಬ್ ಮತ್ತು ಎಚ್. ನಾಗಪ್ಪ, ಸಹಕಾರ್ಯದರ್ಶಿಗಳಾಗಿ ಖಾಸಿಂಖಾನ್ ಮತ್ತು ಬೈರಾನಾಯ್ಕರವರು ಆಯ್ಕೆಯಾಗಿದ್ದಾರೆ. ಅಲ್ಲದೇ ಕಾರ್ಯಕಾರಿ ಸಮಿತಿಗೆ 30 ಸದಸ್ಯರನ್ನು ಆಯ್ಕೆ ಮಾಡಲಾಯಿತು.

ಅಗತ್ಯ ವಸ್ತುಗಳ ಬೆಲೆ ಏರಿಕೆ, ನೀರು ಸರಬರಾಜಿನ ಕೊರತೆ ಮುಂತಾದವುಗಳ ಕುರಿತು ನಿರ್ಣಯ ಅಂಗೀಕರಿಸಲಾಯಿತು.

ಸಿ. ಪಿ. ಐ.ನ ಕರಡು ರಾಜಕೀಯ ನಿರ್ಣಯ

ಎಂ. ಬಸವಪುನ್ನಯ್ಯ

ಸರ್ವಾಧಿಕಾರ ವಿರೋಧೀ ಹೋರಾಟವನ್ನು ಶಿಥಿಲಗೊಳಿಸುತ್ತದೆ

ಮುಂಬರುವ ತನ್ನ 12ನೇ ಅಧಿವೇಶನಕ್ಕೆ ರಾಜಕೀಯ ನಿರ್ಣಯವನ್ನು ಸಿ. ಪಿ. ಐ. ನ ರಾಷ್ಟ್ರೀಯ ಮಂಡಳಿ ಬಿಡುಗಡೆ ಮಾಡಿದೆ. ಸಿ. ಪಿ. ಐ. ದೇಶದಲ್ಲಿ ಸಿ. ಪಿ. ಐ. (ಎಂ) ದೊಂದಿಗೆ ಒಂದು ಪ್ರಮುಖ ಎಡಶಕ್ತಿಯಾಗಿರುವುದರಿಂದ ಈ ಕರಡಿನಲ್ಲಿ ಸದ್ಯದ ರಾಷ್ಟ್ರೀಯ, ಹಾಗೂ ಅಂತರ್ರಾಷ್ಟ್ರೀಯ ಸ್ಥಿತಿಯ ಬಗ್ಗೆ ಮಾಡಿರುವ ಅಂದಾಜು, ಮತ್ತು ಮುಂಬರುವ ಕೆಲವು ವರ್ಷಗಳ ರಾಜಕೀಯ ನಿಲುವೆಯ ಬಗ್ಗೆ ಸಿ. ಪಿ. ಐ. (ಎಂ) ಗೆ ಬಹಳ ಆಸಕ್ತಿಯಿದ್ದು. ದೇಶದಲ್ಲಿನ ಎಡ-ಪ್ರಜಾಪ್ರಭುತ್ವವಾದೀ ಮನೋಭಾವದ ಹಲವರು ಎಡಪಂಥೀಯರ ನಡುವೆ, ವಿಶೇಷವಾಗಿ ಸಿ ಪಿ ಐ ಹಾಗೂ ಸಿ ಪಿ ಐ (ಎಂ) ನಡುವೆ ಒಗ್ಗಟ್ಟು ಇಲ್ಲದಿರುವುದರ ಬಗ್ಗೆ ಆತುರ ವ್ಯಕ್ತಪಡಿಸುತ್ತಿದ್ದಾರೆ; ಇವೆರಡರ ನಡುವೆ ಹೆಚ್ಚೆಚ್ಚು ಒಗ್ಗಟ್ಟು ಉಂಟಾಗಿ ಐಕ್ಯ ಎಡಶಕ್ತಿಗಳು ದೇಶದಲ್ಲಿ ಒಂದು ಎಡ.ಪ್ರಜಾಪ್ರಭುತ್ವವಾದೀ ಪರ್ಯಾಯ ರೂಪಿಸುವುದಕ್ಕೆ ಒತ್ತು ಕೊಡಲು ಸಾಧ್ಯವಾಗಬೇಕು ಎಂದು ಅವರ ಬಯಕೆ. ಸಿ ಪಿ ಐ (ಎಂ) ಅವರ ಈ ಆತುರದಲ್ಲಿ ಪಾಲುಗೊಳ್ಳುತ್ತದೆ. ಹಾಗೂ ಈ ಎರಡು ಪಕ್ಷಗಳ ನಡುವೆ ಐಕ್ಯತೆ ಹಾಗೂ ಐಕ್ಯ ಕಾರ್ಯಾಚರಣೆ ಬಲಪಡಿಸಲು, ಅದನ್ನು ಎಡ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳ ಒಕ್ಕಟ್ಟಿನ ಅವಿಭಾಜ್ಯ ಅಂಗವಾಗಿ ಬೆಳೆಸಲು ಸಾಧ್ಯವಾದುದನ್ನೆಲ್ಲಾ ಮಾಡುತ್ತದೆ. ಈ ಉದ್ದೇಶವನ್ನು ಮನಸ್ಸಿನಲ್ಲಿಟ್ಟುಕೊಂಡು, ಸಿ ಪಿ ಐ ನ ಕರಡು ರಾಜಕೀಯ ನಿರ್ಣಯದ ಕೆಲವು ಅಂಶಗಳ ಬಗ್ಗೆ ನಮ್ಮ ಟೀಕೆ ವ್ಯಕ್ತಪಡಿಸಬಯಸುತ್ತೇವೆ. ಯಾಕೆಂದರೆ ಈ ರಾಜಕೀಯ ನಿರ್ಣಯವನ್ನು ಅದರ 12ನೇ ಅಧಿವೇಶನ ಅಂಗೀಕರಿಸಿದ ಮೇಲೆ ಮುಂಬರುವ ಕೆಲವು ವರ್ಷಗಳ ಕಾಲ ಅದು ಸಿ ಪಿ ಐ ನ ರಾಜಕೀಯ ನಿಲುವೆಗೆ ಮಾರ್ಗದರ್ಶನ ನೀಡುವಂತಹದು.

ಕರಡು ರಾಜಕೀಯ ನಿರ್ಣಯ ಆಳುವ ಕಾಂಗ್ರೆಸ್ ಸರ್ಕಾರದ ಆರ್ಥಿಕ ಹಾಗೂ ರಾಜಕೀಯ ಧೋರಣೆಗಳನ್ನು ಹರಿತವಾಗಿ ಟೀಕಿಸಿದೆ. "ಇಂದಿರಾ ಗಾಂಧಿ ಸರ್ಕಾರದ ಹಿಮ್ಮುಖೀ ಆರ್ಥಿಕ ಧೋರಣೆಗಳು ಬೂರ್ಜ್ವಾ ವ್ಯವಸ್ಥೆಯನ್ನು ಸಂಪೂರ್ಣವಾಗಿ ಆವರಿಸಿರುವ ಆಳವಾದ ಬಿಕ್ಕಟ್ಟಿನ ಪ್ರತಿಫಲ. ಇದು ದೇಶದ ಸ್ಥಿತಿಯನ್ನು ಇನ್ನಷ್ಟು ಕ್ಲಿಷ್ಟ, ಕಠಿಣ ಹಾಗೂ ಇನ್ನಷ್ಟು ಅಪಾಯಕಾರಿಯಾಗಿಸಿದೆ"ಎಂದು ಅದು ಸರಿಯಾಗಿಯೇ ಗಮನಿಸಿದೆ. ಅಲ್ಲದೆ ಇನ್ನೂ ಮುಂದುವರಿದು ಅದು "ಹದಗೆಡುತ್ತಿರುವ ಆರ್ಥಿಕ ಪರಿಸ್ಥಿತಿ ಹಾಗೂ ದುಡಿಯುವ ವರ್ಗ ಮತ್ತು ದುಡಿಯುವ ಎಲ್ಲಾ ಜನವಿಭಾಗಗಳ ಹೆಚ್ಚುತ್ತಿರುವ ಸಮರ ಶೀಲ ಪ್ರತಿರೋಧದಿಂದಾಗಿ ಆಳುವ ಪಕ್ಷ ಅಸಮಾಧಾನ ಸೂಚಿಸುವ ಎಲ್ಲಾ ವ್ಯಕ್ತ ರೂಪಗಳನ್ನು ಅತ್ಯಂತ ತೀವ್ರವಾಗಿ ಸದೆಬಡಿಯಲು ಪ್ರಯತ್ನಿಸುತ್ತಿದೆ" ಎಂದು ಹೇಳಿದೆ.

ಇದರೊಂದಿಗೇ, ಟ್ರೇಡ್ ಯೂನಿಯನ್ ಹಕ್ಕುಗಳನ್ನುದಮನ ಮಾಡುವ, ಸಂಸದೀಯ ಪ್ರಜಾಪ್ರಭುತ್ವವನ್ನೇ ಶಿಥಿಲಗೊಳಿಸುವ ಹೊಸ ಅಸ್ತ್ರಗಳನ್ನು ಉಪಯೋಗಿಸಲಾಗುತ್ತಿದೆ ಎಂದು ಕರಡು ನಿರ್ಣಯ ಹೇಳಿದೆ. ಅಂತಿಮವಾಗಿ, "ದಿವಾಳಿಕೋರ ಬಂಡವಾಳಶಾಹೀ ಪಥ ಹಿಡಿದ ಭೂರ್ಜ್ವಾ ಆಳ್ವಿಕೆ ಜನತೆಯ ಹೆಚ್ಚುತ್ತಿರುವ ಹೋರಾಟಗಳನ್ನು ಎದುರಿಸಲು ಸ್ವಭಾವತಃ ಸರ್ವಾಧಿಕಾರೀ ಹಾದಿ ಹಿಡಿಯುತ್ತದೆಯಾದ್ದರಿಂದ ಬರಲಿರುವ ಕಾಲದಲ್ಲಿ ಈ ಬೆಳೆಯುತ್ತಿರುವ ಸರ್ವಾಧಿಕಾರದ ವಿರುದ್ಧ ಹೋರಾಟ ಹಾಗೂ ಪ್ರಜಾಪ್ರಭುತ್ವ ಮತ್ತು ಟ್ರೇಡ್ ಯೂನಿಯನ್ ಹಕ್ಕುಗಳ ರಕ್ಷಣೆ ಬಹಳ ಮಹತ್ವದ್ದಾಗುತ್ತದೆ" ಎಂದು ಈ ನಿರ್ಣಯ ಹೇಳುತ್ತದೆ.

ಹೆಚ್ಚುತ್ತಿರುವ ಸರ್ವಾಧಿಕಾರದ ಅಪಾಯ, ಸಂಸದೀಯ ವ್ಯವಸ್ಥೆಗೆ, ಜನತೆಯ ಸ್ವಾತಂತ್ರ್ಯಗಳಿಗೆ ಬಂದಿರುವ ಬೆದರಿಕೆಯ ಬಗ್ಗೆ ಸಿ ಪಿ ಐ (ಎಂ) ವಿಶ್ಲೇಷಣೆಯೂ ಸುಮಾರಾಗಿ ಹೀಗೇ ಇದೆ. ಆದರೆ ಸಿ ಪಿ ಐ ನ ಕರಡು ನಿರ್ಣಯ ಈ ಹೆಚ್ಚುತ್ತಿರುವ ಅಪಾಯದ ವಿರುದ್ಧ ಹೋರಾಡಲು ಹಾಕಿಕೊಂಡ ಯೋಜನೆ ಅದರ ಈ ವಿಶ್ಲೇಷಣೆಯೊಂದಿಗೆ ಸರಿಹೊಂದುವುದಿಲ್ಲ ಎಂದು ನಾವು ವಿಷಾದದಿಂದ ತೋರಿಸಿಕೊಡಬೇಕಾಗಿದೆ. "ಸರ್ಕಾರದ ವಿದೇಶೀ ಧೋರಣೆಯನ್ನು ರಕ್ಷಿಸಲು ಸಾಧ್ಯವಿದ್ದಷ್ಟು ವ್ಯಾಪಕವಾಗಿ ಜನರನ್ನು ಹುರಿದುಂಬಿಸುವುದು ನಮ್ಮ ಪಕ್ಷದ ತಕ್ಷಣದ ಗುರಿಯಾಗಬೇಕು" ಎಂದು ಹೇಳುವ ಕರಡು ನಿರ್ಣಯಕ್ಕೆ ಸರ್ವಾಧಿಕಾರದ ಈ ಅಪಾಯದ ವಿರುದ್ಧ ಈ ರೀತಿ ಮಾಡುವ ಜರೂರು ಕಂಡುಬಂದಿಲ್ಲ.

ನಿರ್ಣಾಯಕ ಪ್ರಶ್ನೆಯ ಹಾರಿಕೆ

ಸದ್ಯ ಸರ್ವಾಧಿಕಾರದ ವಿರುದ್ಧ ಹಾಗೂ ಸಂಸದೀಯ ಪ್ರಜಾಪ್ರಭುತ್ವದ ರಕ್ಷಣೆಯ ಹೋರಾಟದಲ್ಲಿ ಆಸಕ್ತಿಯಿರುವ ರಾಜಕೀಯ ಶಕ್ತಿಗಳು ಯಾವುವು ಎಂಬ ಸರಳ ಪ್ರಶ್ನೆಯನ್ನು ಈ ನಿರ್ಣಯ ಕೇಳಿಕೊಳ್ಳುವುದಿಲ್ಲ. ಈ ತಪ್ಪನ್ನು ಮುಚ್ಚಿಹಾಕಿ ಸಾರ್ವಜನಿಕರನ್ನು ತಪ್ಪು ದಾರಿಗೆಳೆಯಲು ಕರಡು ನಿರ್ಣಯ ಸಿ ಪಿ ಐ (ಎಂ) ಚೀನೀ ನಾಯಕತ್ವದ ಬಗ್ಗೆ ತಳೆದ ರಾಜಕೀಯ-ಸೈದ್ಧಾಂತಿಕ ನಿಲುವು" ಹಾಗೂ "ಸರ್ವಾಧಿಕಾರದ ವಿರುದ್ಧ ಹೋರಾಟದಲ್ಲಿ ಬಿ ಜೆ ಪಿ ಯನ್ನೂ ಒಳಗೊಳ್ಳುವ ಸಿ ಪಿ ಐ (ಎಂ) ಪರಿಕಲ್ಪನೆ" ಎಡ ಐಕ್ಯತೆ ಹಾಗೂ ಎಡ ಮತ್ತು ಪ್ರಜಾಪ್ರಭುತ್ವ ಪರ್ಯಾಯ ಕಟ್ಟುವುದಕ್ಕೆ ಅಡ್ಡಿಯೆಂದು ಸಿ ಪಿ ಐ (ಎಂ) ನ್ನು ಆಪಾದಿಸಿದೆ. ಈ ರೀತಿ ಪ್ರಶ್ನೆಯನ್ನು ಸರಳಗೊಳಿಸುವುದು, ಮೆದುಮಾತಿನಲ್ಲಿ ಹೇಳಬೇಕಾದರೆ, ಸಿ ಪಿ ಐ (ಎಂ) ನ ನಿಲುವನ್ನು ವಿರೂಪಗೊಳಿಸುವ, ನಿರ್ಣಾಯಕ ಪ್ರಶ್ನೆಯಿಂದ ನುಣುಚಿಕೊಳ್ಳುವ ಕೆಲಸವಷ್ಟೆ.

ಸಿ ಪಿ ಐ (ಎಂ) ನ ಅಭಿಪ್ರಾಯದಲ್ಲಿ ಸಂಸದೀಯ ಪ್ರಜಾಪ್ರಭುತ್ವದ ರಕ್ಷಣೆ ಹಾಗೂ ಅಧ್ಯಕ್ಷೀಯ ಮಾದರಿ ಸರ್ಕಾರದ ಹೇರಿಕೆಗೆ ವಿರೋಧ ಇವುಗಳಲ್ಲಿ ಆಸಕ್ತಿಯಿರುವ, ರಾಜಕೀಯ ಶಕ್ತಿಗಳ ವ್ಯಾಪಕತೆ ಎಡ ಹಾಗೂ ಪ್ರಜಾಪ್ರಭುತ್ವವಾದೀ ಶಕ್ತಿಗಳಿಗಿಂತಲೂ ಹೆಚ್ಚು. ಕೆಲವು ಬೂರ್ಜ್ವಾ-ಭೂಮಾಲಿಕ ವಿರೋಧ ಪಕ್ಷಗಳಿಗೂ ಈ ಹೋರಾಟದಲ್ಲಿ ತೀವ್ರ ಆಸಕ್ತಿಯಿದೆ. ಯಾಕೆಂದರೆ ಕಾಂಗ್ರೆಸ್ (ಐ) ಹೇಳಬೇಕೆಂದಿರುವ ಏಕ ಪಕ್ಷೀಯ ಆಳ್ವಿಕೆ ಈ ಪಕ್ಷಗಳ ಅಸ್ತಿತ್ವಕ್ಕೇ ಕೊಡಲಿಯೇಟು ಕೊಟ್ಟಂತೆ. ಆದ್ದರಿಂದ ಯಾವುದೇ ರಾಜಕೀಯ ಪಕ್ಷ, ಅದು ಎಡ ಪಂಥೀಯವಾಗಿರಲಿ, ಬಲ ಪಂಥೀಯವಾಗಿರಲಿ ಸಂಸದೀಯ ಪ್ರಜಾಪ್ರಭುತ್ವವನ್ನು ಕಿತ್ತುಹಾಕುವುದನ್ನು ಒಪ್ಪುವುದಿಲ್ಲ. ಒಂದು ಸಾಮಾಜಿಕ ಕ್ರಾಂತಿಯ ಬೆದರಿಕೆ ಇನ್ನೇನು ಸನ್ನಿಹಿತವಾಗಿದೆಯೆನ್ನುವ ಸಮಯ ಬರುವವರೆಗೆ ಈ ಪಕ್ಷಗಳ ಈ ನಿಲುವು ಮುಂದುವರಿಯುತ್ತದೆ. ಇದು ಸಿ ಪಿ ಐ (ಎಂ) ನ ಸೈದ್ಧಾಂತಿಕ ಹೇಳಿಕೆ ಮಾತ್ರವಲ್ಲ; ನಮ್ಮ ದೇಶದ ವಾಸ್ತವಿಕ ಅನುಭವ.

ಸ್ವಾಗತಾರ್ಹ ಬದಲಾವಣೆ

ದಿವಂಗತ ಜಯಪ್ರಕಾಶ ನಾರಾಯಣರ ನೇತೃತ್ವದಲ್ಲಿ ಪ್ರಜಾಪ್ರಭುತ್ವ ಹಕ್ಕುಗಳ ಹಾಗೂ ಸ್ವಾತಂತ್ರ್ಯಗಳ ರಕ್ಷಣೆಗಾಗಿ 1975-77 ರಲ್ಲಿ ನಡೆದ ಹೋರಾಟದಲ್ಲಿ ಈಗಿನ ಬಿ ಜೆ ಪಿ ಯಲ್ಲಿರುವ ಜನಸಂಘ, ಆರ್ ಎಸ್ ಎಸ್ ಸೇರಿದಂತೆ ಹೆಚ್ಚಿನ ಬೂರ್ಜ್ವಾ ಭೂಮಾಲಿಕ ಪಕ್ಷಗಳು ಅಥವಾ ಗುಂಪುಗಳು ಸೇರಿದ್ದವು ಎಂಬುದು ತಿಳಿದ ಸಂಗತಿ. ಈ ಚಳುವಳಿಯೇ ತುರ್ತು ಪರಿಸ್ಥಿತಿ ಕಾಲದಲ್ಲಿ ಕಟ್ಟಿದ ತುರ್ತು ಪರಿಸ್ಥಿತಿಯ ಚೌಕಟ್ಟನ್ನು ಮುರಿದು ಹಾಕಿದ್ದು. ಸಿ ಪಿ ಐ. ಜೆ ಪಿ ಚಳುವಳಿಯನ್ನು ಅಮೆರಿಕನ್ ಸಾಮ್ರಾಜ್ಯ ಶಾಹಿಗಳ ನಿರ್ದೇಶದಂತೆ ನಡೆಯುತ್ತಿರುವ ಫ್ಯಾಸಿಸ್ಟ್ ಚಳುವಳಿಯೆಂದು ಹೇಳಿ ಇಂದಿರಾ ಗಾಂಧಿಯ ತುರ್ತು ಪರಿಸ್ಥಿತಿಯ ಆಡಳಿತವನ್ನು ಸಂತೋಷೋನ್ಮಾದದಿಂದ ಬೆಂಬಲಿಸಿದ್ದನ್ನು ನಾವು ಮನಸ್ಸಿನಲ್ಲಿಟ್ಟುಕೊಂಡಿದ್ದೇವೆ. ಏಪ್ರಿಲ್ 1978ರ ಭಾಟಿಂಡಾ ಅಧಿವೇಶನದಲ್ಲಿ ಸಿ ಪಿ ಐ ತನ್ನ ರಾಜಕೀಯ ನಿಲುವನ್ನು ಬದಲಿಸಿ ಕಾಂಗ್ರೆಸ್ (ಐ) ನ್ನು ವಿರೋಧಿಸಲಾರಂಭಿಸಿತು. ಕೇರಳದ ಒಂದು ದಶಕದ ಮಾರ್ಕ್ಸ್‌ವಾದೀ-ವಿರೋಧೀ ರಂಗದಿಂದ ದೂರವಾಯಿತು. ಅಂದಿನಿಂದ ಕಾಂಗ್ರೆಸ್ (ಐ) ನಿಂದ ಸರ್ವಾಧಿಕಾರೀ ಅಪಾಯವಿದೆಯೆಂದು ಪರಿಗಣಿಸಿದೆ. ಸಿ ಪಿ ಐ (ಎಂ) ಈ ಸ್ವಾಗತಾರ್ಹ ಬದಲಾವಣೆಯನ್ನು ಗಮನಿಸಿದೆ. ಆದರಂತೆ ಎಡ ಐಕ್ಯತೆ, ಎಡ-ಪ್ರಜಾಪ್ರಭುತ್ವ ಐಕ್ಯತೆ, ಕಾರ್ಮಿಕ ವರ್ಗದ, ಜನತೆಯ ಹಕ್ಕುಗಳ ರಕ್ಷಣೆ ಇವೆಲ್ಲದರಲ್ಲಿ ಜಂಟೀ ಕಾರ್ಯಾಚರಣೆಗಳಿಗೆ ಓಗೊಟ್ಟಿದ್ದರಿಂದ ಸಿ ಪಿ ಐ (ಎಂ) ಜನರ ಮೆಚ್ಚುಗೆ ಗಳಿಸಿತು; ಇದರಿಂದ ಎಡ-ಪ್ರಜಾಪ್ರಭುತ್ವವಾದೀ ಶಕ್ತಿಗಳೊಂದಿಗೆ ಸಿ ಪಿ ಐ. ಹಾಗೂ ಸಿ ಪಿ ಐ (ಎಂ) ಕೆಲವು ಪ್ರಶ್ನೆಗಳ ಮೇಲೆ ಪರಸ್ಪರ ಸಮೀಪ ಬರಲು ಸಾಧ್ಯವಾಯಿತು.

ಸಿ ಪಿ ಐ [ಎಂ] ನಿಲುಮೆ

ಆದರೆ ಸಿ ಪಿ ಐ ನಾಯಕತ್ವ ಆಳುವ ಕಾಂಗ್ರೆಸ್ ಪಕ್ಷದೊಂದಿಗೆ ಸಹಕಾರದ ರಾಜಕೀಯ ತಪ್ಪನ್ನು ಸಂಪೂರ್ಣವಾಗಿ ತಿದ್ದಿಕೊಳ್ಳಲು ನಿರಾಕರಿಸುತ್ತಿದೆ. ಬದಲಿಗೆ ಸಿ ಪಿ ಐ (ಎಂ) ಮೇಲೆ ಅದು ಬಿ ಜೆ ಪಿ ಯ ಪ್ರತಿಕ್ರಿಯಾವಾದೀ ಸ್ವಭಾವವನ್ನು ಅರಿತುಕೊಂಡಿಲ್ಲ ಎಂಬಿತ್ಯಾದಿ ಆಪಾದನೆ ಹೊರಿಸುತ್ತದೆ. ಸಿ ಪಿ ಐ (ಎಂ) ಗೆ ಬಿ ಜೆ ಪಿ ಹಾಗೂ ಇತರ ಕೆಲವು ವಿರೋಧ ಪಕ್ಷಗಳ ಪ್ರತಿಕ್ರಿಯಾವಾದೀ ಸ್ವಭಾವದ ಕುರಿತು ಉಪದೇಶ ನೀಡುವುದು ಸಿ ಪಿ ಐ ನಾಯಕತ್ವದ ಮಟ್ಟಿಗೆ ದುರಹಂಕಾರದ ವಿಷಯ. ಸಿ ಪಿ ಐ ಹಾಗೂ ಇತರರ ಪ್ರಯೋಜನಕ್ಕಾಗಿ ಈ ಬಗ್ಗೆ ಸಿ ಪಿ ಐ (ಎಂ) ನ ಹತ್ತನೇ ಅಧಿವೇಶನದ ರಾಜಕೀಯ ನಿರ್ಣಯದ ಅಂಶವನ್ನು ಇಲ್ಲಿ ಕೊಡುತ್ತೇವೆ.

ಆ ನಿರ್ಣಯ ಏನು ಹೇಳುತ್ತದೆ ?– "ಜನತಾ ಪಕ್ಷದ ಮುಖ್ಯ ಘಟಕಗಳ ಪೂರ್ವಾಪರ ಪ್ರಜಾಪ್ರಭುತ್ವ-ವಿರೋಧೀ ಹಾಗೂ ಪ್ರತಿಕ್ರಿಯಾವಾದಿಯಾಗಿದೆ. ಇವು 1971ರಲ್ಲಿ ತನ್ನ ಪಕ್ಷ ತೀವ್ರ ಪ್ರತಿಕ್ರಿಯವಾದೀ, ಬಲಪಂಥೀಯ ಪ್ರತಿಕ್ರಿಯಾವಾದಿಗಳೆಂದು ಕರೆದ 'ಮಹಾ ಮೈತ್ರಿ' ಯಲ್ಲಿದ್ದ ಪಕ್ಷಗಳೇ. ವಿಶೇಷವಾಗಿ ನಮ್ಮ ಪಕ್ಷ ಜನಸಂಘ ಹಾಗೂ ಆರ್. ಎಸ್. ಎಸ್. ನ ಪ್ರತಿಕ್ರಿಯಾವಾದೀ ಸಿದ್ಧಾಂತವನ್ನು ಟೀಕಿಸಿತ್ತು; ಕಾಂಗ್ರೆಸ್ (ಐ) ನ್ನು ಗುತ್ತೇದಾರಿ ಭೂಮಾಲಿಕ ಕೂಟದ ಜಂಟಿ ಪ್ರತಿನಿಧಿಯೆಂದು ವರ್ಣಿಸಿತ್ತು. ಈ ಜನ ಒಂದೊಮ್ಮೆ ಆಸ್ತಿಯ 'ಪವಿತ್ರ ಹಕ್ಕಿ'ನ ಪರವಾಗಿ ನಿಂತಿದ್ದರು. ರಾಜಧನ ರದ್ಧತಿ, ಬ್ಯಾಂಕ್ ರಾಷ್ಟ್ರೀಕರಣ ಇತ್ಯಾದಿಗಳನ್ನು ವಿರೋಧಿಸಿದ್ದರು; ಎಲ್ಲಕ್ಕಿಂತಲೂ ಹೆಚ್ಚಾಗಿ ಕಮ್ಯೂನಿಸ್ಟ್-ವಿರೋಧೀ ಹಿಂಸಾತ್ಮಕ ನಿಲುವು ತಳೆದಿದ್ದರು. ನಮ್ಮ ಪಕ್ಷವನ್ನು ಹಾಗೂ ನಮ್ಮ ನೇತೃತ್ವದ ಪಶ್ಚಿಮ ಬಂಗಾಳ ಸರ್ಕಾರವನ್ನು ಬೈಯುತ್ತಿದ್ದರು. ಪಶ್ಚಿಮ ಬಂಗಾಳದಲ್ಲಿ ನಮ್ಮ ವಿರುದ್ಧ ನಡೆದ ಅರೆಫ್ಯಾಸಿಸ್ಟ್ ಭಯೋತ್ಪಾದನೆಯನ್ನು ಖಂಡಿಸಲು ಇವರು ನಿರಾಕರಿಸಿದ್ದರು.

ಆ ಹೇಳಿಕೆ ಸುಮಾರು ನಾಲ್ಕು ವರ್ಷಗಳ ಹಿಂದಿನದ್ದು, ಸಿ ಪಿ ಐ ನ ನಾಯಕತ್ವ ಈ ವಿರೋಧ ಪಕ್ಷಗಳ ವರ್ಗಸ್ವಭಾವ ಹಾಗೂ ರಾಜಕೀಯ ವರ್ತನೆ ಬಗ್ಗೆ ಸಿ ಪಿ ಐ (ಎಂ) ಗೆ ಅರಿವು ಮೂಡಿಸಲು ತನ್ನ ಶಕ್ತಿಯನ್ನು ವ್ಯಯಿಸಬೇಕಾಗಿಲ್ಲ.

ಬಿ ಜೆ ಪಿ ಬಗ್ಗೆ ಸಿ ಪಿ ಐ (ಎಂ) ನ ನಿಲುವು ಹಾಗೂ "ಎಲ್ಲಾ ವಿರೋಧ ಪಕ್ಷಗಳ ಐಕ್ಯತೆಯ ಅದರ ಪರಿಕಲ್ಪನೆ" ಎಡ ಐಕ್ಯತೆ ಹಾಗೂ ಎಡ-ಪ್ರಜಾಪ್ರಭುತ್ವ ಪರ್ಯಾಯ ರಚನೆಗೆ ಅಡ್ಡಿಯೆಂದು ಸಿ ಪಿ ಐ ನ ಕರಡು ನಿರ್ಣಯ ಖಿನ್ನವಾಗಿ ಹೇಳುತ್ತದೆ. ಬಿ ಜೆ ಪಿ. ಬಗ್ಗೆ ಸಿ ಪಿ ಐ (ಎಂ) ನ ನಿಲುವು ರಾಜೀಮನೋಭಾವದ್ದು, ಸಿ ಪಿ ಐ ನೆರವು ಮಾತ್ರ ಸ್ಥಿರ ಹಾಗೂ ನೀತಿಬದ್ಧವಾದದ್ದು ಎನ್ನುವುದು ತೀರಾ ಒರಟಾದ ಮಿಥ್ಯಾಪವಾದ. ಜನಸಂಘದೊಂದಿಗೆ ಇಂತಹ ಐಕ್ಯತೆ, ಬಿಹಾರದ ಸಮ್ಮಿಶ್ರ ಸರ್ಕಾರದಲ್ಲಿ 1967-69ರಲ್ಲಿ ಪಾಲುಗೊಂಡದ್ದು ಇತ್ಯಾದಿ ಸಿ ಪಿ ಐ ನ ಕಾರ್ಯತಂತ್ರಗಳು. 1975-77ರಲ್ಲಿ ಜನಸಂಘ ಹಾಗೂ ಇತರ ಬೂರ್ಜ್ವಾ ವಿರೋಧ ಪಕ್ಷಗಳನ್ನು ಫ್ಯಾಸಿಸ್ಟ್ ಹಾಗೂ ಸಾಮ್ರಾಜ್ಯಶಾಹೀ ಏಜೆಂಟರೆಂದು ಕರೆದದ್ದು ಕೂಡ ಸಿ ಪಿ ಐ ! ಸಿ ಪಿ ಐ (ಎಂ) ಎಂದೂ ಈ ರಾಜಕೀಯ ತಿಪ್ಪರಲಾಗದ ತಪ್ಪು ಮಾಡಿಲ್ಲ. ಈ ರೀತಿಯ ದ್ವೇಷಪೂರ್ಣ ಟೀಕೆ ಮಾಡುವುದು ಸಿ ಪಿ ಐ ಗೆ ಸಲ್ಲ.

(ಮುಂದುವರಿಯುವುದು)

ಚಂದಾ ವಿವರ

ಬಿಡಿ ಪ್ರತಿ.	:	60 ಪೈಸೆ
6 ತಿಂಗಳಿಗೆ	:	15 ರೂ.
ವಾರ್ಷಿಕ ಚಂದಾ	:	30 ರೂ.

೧೧ನೇ ಅಧಿವೇಶನ ಕುರಿತು

(3ನೇ ಪುಟದಿಂದ)

ಗಿಸುವ ಹಂತದವರೆಗೆ ಒಯ್ಯಿತು ಭಾಟಿಂಡಾ ಅಧಿವೇಶನದಲ್ಲಿ ಸಿ. ಪಿ. ಐ. ತನ್ನ ಕಾರ್ಯಕ್ರಮದ ಸ್ವರೂಪವನ್ನು ಬದಲಿಸಲಿಲ್ಲ. ಅಲ್ಲಿ ತುರ್ತು ಪರಿಸ್ಥಿತಿಯನ್ನು ತಾವು ಬೆಂಬಲಿಸಿದ್ದು ತಪ್ಪು ಎಂದು ಬಹುಮತದಿಂದ ನಿರ್ಧರಿಸಲಾಯಿತು. ಆದರೆ ದುರದೃಷ್ಟವಶಾತ್ ಹಿಂದಿನ ತನ್ನ ಎಲ್ಲಾ ತಪ್ಪುಗಳನ್ನು ಒಪ್ಪಿಕೊಂಡು ತನ್ನ ಕಾರ್ಯಕ್ರಮದಲ್ಲಿ ಆಮೂಲಾಗ್ರ ಬದಲಾವಣೆಯನ್ನು ಇನ್ನೂ ಮಾಡಿಲ್ಲ.

ಕಾಂಗ್ರೆಸ್‌ನೊಡನೆ ಸಹಕಾರ

'ರಾಷ್ಟ್ರೀಯ ಪ್ರಜಾಪ್ರಭುತ್ವ ರಂಗ'ದ ಪರಿಕಲ್ಪನೆಯನ್ನು ಸೇರಿಸಿದ ಅಂಶ ತಾನಾಗಿಯೇ ಅವಿಭಜಿತ ಪಕ್ಷದ ಇಬ್ಭಾಗಕ್ಕೆ ಕಾರಣವಾಗುತ್ತಿರಲಿಲ್ಲ. ಆದರೆ ಯಾವ ಆಶಯದಿಂದ ಈ ಪರಿಕಲ್ಪನೆ ಅವಿರೋಧವಾಗಿ ಅಂಗೀಕೃತವಾದ 6ನೇ ಅಧಿವೇಶನದ ರಾಜಕೀಯ ನಿರ್ಣಯಕ್ಕೆ ಸೇರಿಸಲಾಯಿತೋ ಅದು ಬೇರೆ ಬೇರೆ ಸಂಗಾತಿಗಳ ಹಾಗೂ ಸಂಗಾತಿಗಳ ಬೇರೆ ಬೇರೆ ಗುಂಪುಗಳಿಗೆ ಬೇರೆ ಬೇರೆ ರೀತಿಯದಾಗಿತ್ತು. ಈ ಪರಿಕಲ್ಪನೆಯನ್ನು 6ನೇ ಅಧಿವೇಶನದಲ್ಲಿ ಎಳೆದು ತಂದದ್ದು ಎಸ್. ಎ. ಡಾಂಗೇ ನೇತೃತ್ವದ ಬಲ ಪರಿಷ್ಕರಣವಾದೀ ಕೂಟ. ಈ ಪರಿಕಲ್ಪನೆಗೆ ಅವರ ಅರ್ಥ ಕಾಂಗ್ರೆಸ್‌ನೊಂದಿಗೆ ಪೂರ್ಣ ಪ್ರಮಾಣದ ಸಹಕಾರ ಬಿಟ್ಟು ಬೇರೇನೂ ಆಗಿರಲಿಲ್ಲ. 1957 ರ ಘೋಷಣೆ ಹಾಗೂ 1960ರ ಹೇಳಿಕೆ 'ಸ್ವಾತ್ಮಕ'ವಾಗಿ ಮುಂದು ಮಾಡಿದ 'ರಾಷ್ಟ್ರೀಯ ಪ್ರಜಾಪ್ರಭುತ್ವ'ದ ಪರಿಕಲ್ಪನೆಯನ್ನು ಪ್ರಾಮಾಣಿಕವಾಗಿ ಕಾರ್ಯರೂಪಕ್ಕೆ ತರುವ ಒಳ್ಳೆಯ ಆಶಯ ಹೊಂದಿದ್ದ ಕೆಲವು ಸಂಗಾತಿಗಳು ಡಾಂಗೇ ಕೂಟದ ಈ ಕೆಲಸವನ್ನು ಸುಲಭಗೊಳಿಸಿದರು. ಈ ಸಂಗಾತಿಗಳ ವಾದವೆಂದರೆ ಭಾರತದ ಆರ್ಥಿಕತೆಯ ಮೇಲೆ ಸಾಮ್ರಾಜ್ಯಶಾಹೀ ಹಿಡಿತದ ವಿರುದ್ಧ ಹೋರಾಡಲು, ಸಾಮ್ರಾಜ್ಯಶಾಹಿ ನಮ್ಮ ಆರ್ಥಿಕ ವ್ಯವಸ್ಥೆಯೊಳಗೆ ನುಗ್ಗುವುದನ್ನು ತಡೆಯಲು ಭಾರತದಲ್ಲಿನ ಸದ್ಯದ ಹಂತವನ್ನು ಅಪೂರ್ಣ ರಾಷ್ಟ್ರೀಯ ವಿಮೋಚನೆಯ ಹಂತವೆಂದು ಪರಿಗಣಿಸಬೇಕು. ಇದಕ್ಕೆ 'ರಾಷ್ಟ್ರೀಯ ಪ್ರಜಾಪ್ರಭುತ್ವ' ಬೇಕು. ಕೆಲವು ಸಂಗಾತಿಗಳು ಈ ಬಗ್ಗೆ ನಿರ್ಧಾರಕ್ಕೆ ಬರಲು ಹಿಂಜರಿಯುತ್ತಿದ್ದರು. ಯಾಕೆಂದರೆ 'ರಾಷ್ಟ್ರೀಯ ಪ್ರಜಾಪ್ರಭುತ್ವ' ಪರಿಕಲ್ಪನೆಯಿಂದಾಗಿ ವರ್ಗ ಹೋರಾಟದಲ್ಲಿ ಬರುವ ಸಡಿಲತೆ ಪಕ್ಷಕ್ಕೆ ತೀವ್ರ ಅಪಾಯವೊಡ್ಡುತ್ತದೆಯೆಂದು ಅವರ ಅನುಭವ ಹೇಳುತ್ತಿತ್ತು. ಒಂದೆಡೆ ಅಂತರಾಷ್ಟ್ರೀಯ ನಿಲುವಿಗೆ ಅವರು ವಿಧೇಯರಾಗಿದ್ದರು. ಇನ್ನೊಂದೆಡೆ ಆ ಪಥವನ್ನು ಸ್ವೀಕರಿಸುವುದರ ಅಪಾಯವನ್ನು ಗ್ರಹಿಸಬಲ್ಲವರಾಗಿದ್ದರು. ತದನಂತರ ಈ ರೀತಿಯ ಮಧ್ಯಮ ಮಾರ್ಗಗಳಲ್ಲೇ ಒಡಕುಂಟಾಯಿತು. ಇವರಲ್ಲಿ ಒಬ್ಬ ಟೀಕಾಕಾರರು ಎಷ್ಟೊಂದು ಅನಿಶ್ಚಯ ಸ್ಥಿತಿಯಲ್ಲಿದ್ದರೆಂದರೆ ಭಾರತಕ್ಕೆ 'ರಾಷ್ಟ್ರೀಯ ಪ್ರಜಾಪ್ರಭುತ್ವ' ಯೋಗ್ಯವೋ ಅಥವಾ 'ಜನತಾ ಪ್ರಜಾಪ್ರಭುತ್ವವೋ' ಎಂಬುದರ ಬಗ್ಗೆ ನಿರ್ಣಯವನ್ನು ಮುಂದೂಡಬೇಕೆಂದು ಅವರು ವಾದ ಹೂಡುವಂತಾಗಿತ್ತು. ಆದರೆ ಬೂರ್ಜ್ವಾವರ್ಗದೊಡನೆ ಅಧಿಕಾರ ಹಂಚಿಕೊಳ್ಳಬೇಕೆಂದು ಕೇಳುವುದರಲ್ಲಿ ಅವರಿಗೆ ಯಾವ ಹಿಂಜರಿಕೆಯೂ ಇರಲಿಲ್ಲ. ಸ್ವಾಭಾವಿಕವಾಗಿಯೇ ಅವರು ಸಿ. ಪಿ. ಐ ನಲ್ಲಿ ಉಳಿದುಕೊಂಡರು. ಕಾಂಗ್ರೆಸ್ ಪಕ್ಷ ಅಧಿಕಾರದ ಗುತ್ತೇದಾರಿಕೆ ಅನುಭವಿಸುತ್ತಿದೆ ಆ ಗುತ್ತೇದಾರಿಕೆಯನ್ನು ಕೊನೆಗಾಣಿಸಲು ಸಿ ಪಿ. ಐ. ಸಾಮೂಹಿಕ ಚಳುವಳಿಗಳ ಸಹಾಯದಿಂದ ಕಾಂಗ್ರೆಸ್‌ನೊಡನೆ ಅಧಿಕಾರ ಹಂಚಿಕೊಳ್ಳಬೇಕು ಅದು ಅವರ ವಾದದ ಸಾರಾಂಶ. ತಮ್ಮ ಮಾರ್ಗವನ್ನು ಪಕ್ಷದ ಮೇಲೆ ಹೇರಲು ಡಾಂಗೇವಾದಿಗಳು ಇಂತಹ ಸಂಗಾತಿಗಳ ಬಲವನ್ನು ಪಯೋಗಿಸಿಕೊಂಡದ್ದು ತೀರಾ ಸ್ವಾಭಾವಿಕ. ಅಧಿಕಾರ ಹಂಚಿಕೊಳ್ಳುವ ಈ ಪ್ರಯತ್ನ ಇಂದಿರಾ ಗಾಂಧಿಗೆ ಒಂದು ಸರ್ವಾಧಿಕಾರೀ ಕೇಂದ್ರ ಬೆಳೆಸುವ ಕೆಲಸವನ್ನು ಸುಗಮಗೊಳಿಸಿತು ಎಂದು ನಮಗೆಲ್ಲಾ ಗೊತ್ತಿದೆ.

ಜನತಾ ಪ್ರಜಾಪ್ರಭುತ್ವ

ಇನ್ನೊಂದು ಸಂಗಾತಿಗಳ ಗುಂಪು ಆಗಲೇ 4ನೇ ಅಧಿವೇಶನದಿಂದ ಆರಂಭಿಸಿ ವರ್ಗ ಸಹಕಾರವನ್ನು ಹಿಂಬಾಗಿಲಿನಿಂದ ತರುವ ಪ್ರಯತ್ನಗಳಿಂದ ಬೇಸರಗೊಂಡಿದ್ದ ಇವರು 'ಜನತಾ ಪ್ರಜಾಪ್ರಭುತ್ವ'ದ ಸಿದ್ಧಾಂತವನ್ನು ಪ್ರತಿಪಾದಿಸುತ್ತಿದ್ದರು. ಅವರೂ ಕೂಡಾ ಕಾಂಗ್ರೆಸ್ ಆಡಳಿತದ ಏಕಸ್ವಾಮ್ಯವನ್ನು ಕೊನೆಗಾಣಿಸಬಯಸುತ್ತಿದ್ದರು. ಆದರೆ ಇದನ್ನು ಅಧಿಕಾರ ಹಂಚಿಕೊಳ್ಳುವುದರ ಮೂಲಕವಲ್ಲ, ಕಾಂಗ್ರೆಸ್ ವಿರುದ್ಧವಾಗಿ ಸಾಮೂಹಿಕ ಚಳುವಳಿಗಳ ಮೂಲಕ ಸಾಮ್ರಾಜ್ಯಶಾಹಿ, ಊಳಿಗಮಾನ್ಯ ಪದ್ಧತಿ, ಹಾಗೂ ಗುತ್ತೇದಾರಿ ಬಂಡವಾಳಶಾಹಿಗೆ ವಿರುದ್ಧವಾಗಿರುವ ವಿವಿಧ ವರ್ಗಗಳು ಕಾರ್ಮಿಕ ವರ್ಗದ ನೇತೃತ್ವದಲ್ಲಿರುವ 'ಜನತಾ ಪ್ರಜಾಪ್ರಭುತ್ವ ರಂಗದ'ದ ಮೂಲಕ ಸಾಧಿಸಬಯಸುತ್ತಿದ್ದರು. ಕಾರ್ಮಿಕ ಮತ್ತು ರೈತರ ಸಖ್ಯ ಈ ರಂಗದ ಅಂತಃಸತ್ವವಾಗಿರುತ್ತದೆ. ಬಲಪಂಥೀಯರು ಈ ಮಾರ್ಗವನ್ನು ಪಂಥವಾದೀ, ಕಲ್ಕತ್ತಾದ ಎರಡನೇ ಅಧಿವೇಶನದ ಸಿದ್ಧಾಂತದ ಕಡೆಗೆ ಹಿಂಜರಿಯುವಿಕೆ ಇತ್ಯಾದಿಯಾಗಿ ಜರೆದರು. ಕೆಲವಾದರೂ ಸಂಗಾತಿಗಳು ಇದು ಬಹಳ ದುರ್ಗಮವಾದ ದಾರಿ, ಅಸಾಧ್ಯ ಉದ್ದೇಶ ಇತ್ಯಾದಿ. ಆದರೆ ಈ ಮಾರ್ಗದಲ್ಲಿ ವರ್ಗಸಹಕಾರದ ಅಪಾಯವಿಲ್ಲ. ಆದ್ದರಿಂದ ಅದು ಮುಂದುವರಿಯಲು ಸಾಧ್ಯವಿದೆ ಎಂದು ಭಾವಿಸಿದರು. 'ಜನತಾ ಪ್ರಜಾಪ್ರಭುತ್ವ' ಎಂಬುದು ಕ್ರಾಂತಿಯ ಒಂದು ಸಂಪೂರ್ಣ ಹಂತದ ಕುರಿತಾದ ಪರಿಕಲ್ಪನೆ. ಕೇವಲ ಒಂದು ಕರೆ ನೀಡಿದಾಕ್ಷಣ ಅದನ್ನು ಸಾಧಿಸಲು ಸಾಧ್ಯವಿಲ್ಲ. 'ಜನತಾ ಪ್ರಜಾಪ್ರಭುತ್ವ ರಂಗ'ವನ್ನು ತಕ್ಷಣ ರಚಿಸಲು ಸಾಧ್ಯವಿಲ್ಲ. ಆದ್ದರಿಂದ 7ನೇ ಅಧಿವೇಶನ (ಕಲ್ಕತ್ತಾ, 1964) ಅಂಗೀಕರಿಸಿದ ಕಾರ್ಯಕ್ರಮದಲ್ಲಿ ವಿವಿಧ ವರ್ಗಗಳು ಹಾಗೂ ದರ್ಜೆಗಳ ಮೈತ್ರಿಗಾಗಿ ಶ್ರಮಿಸುವ ಮಧ್ಯಂತರ ಘೋಷಣೆಗಳನ್ನು ನೀಡಿ, ಆ ಮೂಲಕ ಅಂತಿಮವಾಗಿ 'ಜನತಾ ಪ್ರಜಾಪ್ರಭುತ್ವ ಕ್ರಾಂತಿ' ಸಾಧಿಸಲು 'ಜನತಾ ಪ್ರಜಾಪ್ರಭುತ್ವ ರಂಗ' ಸ್ಥಾಪಿಸುವ ಯೋಜನೆಯನ್ನು ಮುಂದಿಡಲಾಯಿತು.

7ನೇ ಅಧಿವೇಶನದ ನಂತರದ ಬೆಳವಣಿಗೆ ಸಿ. ಪಿ. ಐ. (ಎಂ) ಹಿಡಿದ ಮಾರ್ಗದ ಸಫಲತೆಯನ್ನು ರುಜುವಾತುಪಡಿಸಿದೆ. ಅಂತರಾಷ್ಟ್ರೀಯ ಹಾಗೂ ರಾಷ್ಟ್ರೀಯ ನಿಲುವುಗಳ ಬಗ್ಗೆ ಪರಸ್ಪರ ವಿರೋಧಿಯಾದ ಭಿನ್ನತೆಗಳಿರಲು ಸಾಧ್ಯವಿಲ್ಲ. ಅಂತರಾಷ್ಟ್ರೀಯವಾಗಿ ನಾವು ವಿವಿಧ ಪಕ್ಷಗಳಿಂದ ಘೋರ ವಿರೋಧವನ್ನು ಎದುರಿಸಬೇಕಾಗಿ ಬಂದರೂ ನಾವು ಕಾ। ಲೆನಿನ್‌ರವರು ಈ ಹಿಂದೆ ಹೇಳಿದ ಅಂತರಾಷ್ಟ್ರೀಯತೆಯ ಪರಿಕಲ್ಪನೆಯನ್ನು ಚಾಚೂ ತಪ್ಪದೆ ಪರಿಪಾಲಿಸಿದ್ದೇವೆ ಎಂಬ ಬಗ್ಗೆ ನಮಗೆ ಹೆಮ್ಮೆಯಿದೆ. ಆದ್ದರಿಂದ ಈ ಕಾರ್ಯಕ್ರಮ ಯಶಸ್ವಿಯಾಗಿ ಪೂರ್ಣಗೊಂಡಿರುವುದರ ಸಂಕೇತ ವಿಜಯವಾಡದಲ್ಲಿನ 11ನೇ ಅಧಿವೇಶನ.

ಆಳುವ ವರ್ಗಗಳಿಗೆ ಸಿಟ್ಟು

ಸರಿಯಾದ ಕಾರ್ಯಕ್ರಮವನ್ನು 1964 ರಲ್ಲಿ ಕಲ್ಕತ್ತಾದಲ್ಲಿ ಏಳನೆಯ ಅಧಿವೇಶನದಲ್ಲಿ ಅಂಗೀಕರಿಸಿದ ಕೂಡಲೇ ಆಳುವ ವರ್ಗಗಳಿಗೆ ಆಗ 'ಎಡ' ಎಂದು ಹೆಸರಿಸಲ್ಪಟ್ಟ ಸಿ. ಪಿ ಐ. ನ ಈ ವಿಭಾಗದ ಬಗ್ಗೆ ಸಹಿಸಲಾರದ ಸಿಟ್ಟು ಬಂದದ್ದು ಸ್ವಾಭಾವಿಕವೇ. ಅವರು ಪಕ್ಷದ ಮೇಲೆ ದಾಳಿ ನಡೆಸಲಾರಂಭಿಸಿದರು. ಕಾಂಗ್ರೆಸ್‌ನೊಂದಿಗೆ ಸಹಕಾರವನ್ನು ವಿರೋಧಿಸುವವರಿಗೆ ಚೀನಿ ಏಜಂಟರು, ಬಲ ಪ್ರತಿಕ್ರಿಯಾವಾದಿಗಳೊಂದಿಗೇನೆ ಪಾಲುದಾರರು ಇತ್ಯಾದಿಯಾಗಿ ಅಣೇಪಟ್ಟಿ ಹಚ್ಚಿದರು. ಈ ರೀತಿ 'ಎಡ' ಎಂದು ಖಂಡಿಸಲ್ಪಟ್ಟವರಿಗೆ ಕಿರುಕುಳ ಕೊಟ್ಟು ಕಾಂಗ್ರೆಸ್‌ನ್ನೊಂದಿಗೆ ಅಧಿಕಾರ ಹಂಚಿಕೊಳ್ಳಲು ಸಾಧ್ಯವಿದ್ದ ಎಲ್ಲಾ ಪ್ರಯತ್ನ ನಡೆಸಿದರು. ಕೇರಳ ಹಾಗೂ ಪಶ್ಚಿಮ ಬಂಗಾಳದಲ್ಲಿ ಸಂಯುಕ್ತರಂಗ ರಚಿಸಿಕೊಳ್ಳುವುದು ಹಾಗೂ ಮುರಿಯುವುದು ಇತ್ಯಾದಿ ಅವರ ಬತ್ತಳಿಕೆಯಲ್ಲಿನ ಅಸ್ತ್ರಗಳಿಗೊಂದು ಉದಾಹರಣೆಯಷ್ಟೆ.

ನಮ್ಮ ಪಕ್ಷ ಪರಿಷ್ಕರಣವಾದಿಗಳ ಹಾಗೂ ಭಾರತದ ಆಳುವ ವರ್ಗ ಇವೆರಡರಿಂದಲೂ ಅಮಾನುಷ ಕಿರುಕುಳ ಅನುಭವಿಸಿದೆ. ಪರಿಷ್ಕರಣವಾದಿಗಳಿಂದ ಬೇರೆಯಾಗಬೇಕೆಂದು ಪಕ್ಷ ನಿರ್ಧರಿಸಿದ ಕೂಡಲೇ ನಮ್ಮ ಎಲ್ಲಾ ಪ್ರಮುಖ ಸಂಗಾತಿಗಳು ಬಂಧಿತರಾದರು. 7 ನೇ ಅಧಿವೇಶನದ ನಂತರ ಸಿ.ಪಿ.ಐ. (ಎಂ) ನ ಕೇಂದ್ರ ಸಮಿತಿ ಸಭೆ ಸೇರಲು ಎರಡು ವರ್ಷಗಳೇ (1964-66) ಬೇಕಾಯಿತು. ಬಂಗಾಳ ಹಾಗೂ ಕೇರಳದಲ್ಲಿ ಪಕ್ಷವನ್ನು ಎಷ್ಟೊಂದು ಅರೆಫ್ಯಾಸಿಸ್ಟ್ ಭಯೋತ್ಪಾದನೆಗೆ ಗುರಿಪಡಿಸಲಾಯಿತೆಂಬುದು ನಮ್ಮ ಎಲ್ಲಾ ಸಂಗಾತಿಗಳಿಗೆ ತಿಳಿದಿದೆ. 1975-76 ರಲ್ಲಿ ರಾಷ್ಟ್ರೀಯ ಬೂರ್ಜ್ವಾವರ್ಗ ಅದು 'ಬಲಪಂಥೀಯ ಪ್ರತಿಕ್ರಿಯಾವಾದ' ಎಂದು ಕರೆದ ಚಳುವಳಿಯನ್ನು ಸದೆಬಡೆಯಲಾರಂಭಿಸಿದಾಗ ಸಿ.ಪಿ.ಐ. ತನ್ನ ಈ ನಿಲುವಿನ ತುತ್ತ ತುದಿ ತಲುಪಿತು. ಅದು ನಮಗೂ ಸಂಧಿಕಾಲವಾಗಿತ್ತು. 1977ರ ಸಾರ್ವತ್ರಿಕ ಚುನಾವಣೆಯಲ್ಲಿ ಇಂದಿರಾ ಸೋತರು. ಅಧಿಕಾರಕ್ಕೆ ಬಂದ ಪಕ್ಷ, ಅಂದರೆ ಜನತಾ ಪಕ್ಷವೂ ಭಿನ್ನವೇನೂ ಆಗಿರಲಿಲ್ಲ. ಅದು ಹಳೇ ಧೋರಣೆಯನ್ನೇ ಅನುಸರಿಸಿತು, ನಾವು ಜನತಾ ಪಕ್ಷದ ಜತೆಗೆ ಸಂಪೂರ್ಣವಾಗಿ ಕಣ್ಣು ಮುಚ್ಚಿ ಹೋಗದೆ ಆಳುವ ವರ್ಗಗಳ ಬಗ್ಗೆ ವಿರೋಧದ ನಮ್ಮ ನಿಲುವನ್ನು ಕಾಪಾಡಿಕೊಂಡೆವು ಎಂಬುದು ನಮ್ಮ ಪಕ್ಷಕ್ಕೆ ಹೆಮ್ಮೆಯ ವಿಷಯ.

ನಮ್ಮ ಈ ಮಾರ್ಗದ ಸಫಲತೆಯನ್ನು ಒಪ್ಪಿದರಿಂದಾಗಿಯೇ ವಾಸ್ತವದಲ್ಲಿ ಹಾಗೂ ಕಾರ್ಯಗತಃ ನಮ್ಮ ಪಕ್ಷಕ್ಕೆ ಅಂತರಾಷ್ಟ್ರೀಯ ಮನ್ನಣೆ ದೊರೆತಿರುವುದು. ಮತ್ತು ಇದರಿಂದಾಗಿಯೇ ಮತ್ತೊಮ್ಮೆ ಪಕ್ಷ ಆಳುವ ವರ್ಗಗಳ ಕೋಪಕ್ಕೆ ಪಾತ್ರವಾಗುತ್ತಿರುವುದು. ಸಿ. ಪಿ. ಐ. (ಎಂ) ಎಡ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳು ಒಗ್ಗಟ್ಟಾಗಿ ದುಡಿದಿವೆ. ಇದನ್ನೇ ರಾಷ್ಟ್ರೀಯ ಪತ್ರಿಕಾ ರಂಗ 'ಸಾಮ್ರಾಜ್ಞಿಯ ವಿರೋಧ ಪಕ್ಷ' ಎಂದೇ ಹೇಳಿರುವುದು. ಈ ಬಗ್ಗೆ ವಾಸ್ತವ ಸಂಗತಿಗಳನ್ನು ಮುಂದಿನ ಲೇಖನದಲ್ಲಿ ಪರಿಶೀಲಿಸೋಣ. ●

ಗೋಕಾಕ ವರದಿ ಕುರಿತು

ವಿಚಾರ ಸಂಕಿರಣ

ಬಿಜಾಪುರದ ಸಮಾಜ ವಿಜ್ಞಾನ ವೇದಿಕೆಯ ಆಶ್ರಯದಲ್ಲಿ ಫೆ. ೭೩ ರಂದು ಗೋಕಾಕ ವರದಿ ಕುರಿತು ವಿಚಾರ ಗೋಷ್ಠಿ ನಡೆಯಿತು. ಶ್ರೀಮತಿ ಎಸ್. ಸಿ. ಕುಲಕರ್ಣಿಯವರು ಗೋಕಾಕ ವರದಿಯ ವಿವರಣೆ ನೀಡಿ, ಕನ್ನಡ ಭಾಷೆಗೆ ಪ್ರಥಮ ಸ್ಥಾನ ಕೊಡುವುದು ಅಗತ್ಯವೆಂದೂ, ಅದರ ಜೊತೆಯಲ್ಲೇ ಪಠ್ಯ ಪುಸ್ತಕಗಳಲ್ಲಿರುವ ಕನ್ನಡ ಪಾಠಗಳ ಕಡೆ ಲಕ್ಷ್ಯ ಎಳೆದು, ಇಂಥ ಪಾಠಗಳನ್ನು ಕಲಿಸಲು ನಾಚಿಕೆಯಾಗುತ್ತಿದೆ ಎಂದು ಹೇಳಿ, ಅಲ್ಪ ಭಾಷಿಕರ ಸಮಸ್ಯೆಗಳಿದ್ದರೆ ಚರ್ಚಿಸಿ ಬಗೆಹರಿಸಬೇಕೆಂದು ತಮ್ಮ ಅಭಿಪ್ರಾಯ ಮಂಡಿಸಿದರು. ಅಪ್ಪಾಸಾಹೇಬ ಯಗನಾಳ, ಎನ್. ಕೆ. ಉಪಾಧ್ಯಾಯ ಇವರು ಮಾತಾಡಿ ಬಂಡವಾಳಶಾಹಿ ಸರ್ಕಾರದ ನೀತಿಯಿಂದಾಗಿ ಕರ್ನಾಟಕ ರಾಜ್ಯ ಸ್ಥಾಪನೆಯಾದ 26ನೇ ವರ್ಷದಲ್ಲಿ, ಕನ್ನಡ ಭಾಷೆ, ಶಿಕ್ಷಣ ಮಾಧ್ಯಮದ ಸ್ಥಾನದ ಕುರಿತು ಚರ್ಚೆ ಮಾಡುತ್ತ ಕೂತು, ಅಲ್ಪ ಭಾಷಿಕರಲ್ಲೂ ಗೊಂದಲವೆಬ್ಬಿಸುವಂತಾಗಿದೆಯೆಂದು ಹೇಳಿ, ಕನ್ನಡ ಭಾಷೆಯ ಅಭಿಮಾನ ಉರ್ದು ಮತ್ತಿತರ ಭಾಷೆಗಳ ಮೇಲೆ ಅನ್ಯಾಯವೆಸಗದಂತೆ ಮಾಡುವುದಗತ್ಯವೆಂದರೆ, ಸಹಜಾನಂದ ದಂಥರಗಿ, ಬಿದರಿ, ಡಾ॥ ನಾಗೊರ ಮೊದಲಾದವರು ಗೋಕಾಕ ವರದಿಯನ್ನು ಇದ್ದಂತೆಯೇ ಜ್ಯಾರಿಯಲ್ಲಿ ತರಬೇಕೆಂಬ ಅಭಿಪ್ರಾಯ ವ್ಯಕ್ತಮಾಡಿದರು. ಶ್ರೀ ಬಿಜ್ಜರಗಿ ಮೊದಲಾದ ಉರ್ದು ಭಾಷಿಕರು ಮಾತಾಡುತ್ತ ಕನ್ನಡ ಪ್ರಥಮ ಭಾಷೆಯಾಗುವುದಕ್ಕೆ ತಮ್ಮ ಅಭ್ಯಂತರವಿಲ್ಲೆಂದೂ, ಕರ್ನಾಟಕದಲ್ಲಿ ರಾಜ್ಯಭಾಷೆ ಶಿಕ್ಷಣ ಮಾಧ್ಯಮ ಕನ್ನಡವೇ ಇರಬೇಕೆಂದೂ, ಆದರೆ ಉರ್ದು ಮತ್ತಿನ್ನಿತರ ಭಾಷೆಗಳ ಕಲಿಕೆಗೂ ಸರಿಯಾದ ವ್ಯವಸ್ಥೆ ಇರುವುದರ ಅವಶ್ಯಕತೆ ಒತ್ತಿ ಹೇಳಿದರು. ಅಧ್ಯಕ್ಷತೆ ವಹಿಸಿದ್ದ ಪ್ರೊ. ಹಿಪ್ಪರಗಿಯವರು, ಗೋಕಾಕ ವರದಿಯಲ್ಲಿ ಹೇಳಿದಂತೆ ಕನ್ನಡ ಪ್ರಥಮಾ ಭಾಷೆಯಾಗಿ, ಕನ್ನಡ ಮಾಧ್ಯಮವಾಗುವಂತೆ ಹೋರಾಡುವುದಗತ್ಯವೆಂದೂ, ಉರ್ದು ಪರ ಚಳುವಳಿಯಿಂದಾಗಿ ಗೋಕಾಕ ವರದಿ ಮಾತೆ ಗುಂಪಾಗುವ ಸಾಧ್ಯತೆಯಿದೆಯೆಂದೂ, ಇದರ ಜೊತೆಯಲ್ಲೇ ಉರ್ದು, ಮರಾಠಿ ಶಾಲೆಗಳ ಶಿಕ್ಷಕರ, ಪಾಲಕರ ಜೊತೆಯಲ್ಲಿ ಚರ್ಚೆ ಮಾಡಿ, ಅವರ ತೊಂದರೆಗಳನ್ನು ತಿಳಿದುಕೊಂಡು ಅದರ ಪರಿಹಾರಕ್ಕಾಗಿಯೂ ಪ್ರಯತ್ನಿಸಬೇಕೆಂದು ಹೇಳಿದರು. ಸಂಚಾಲಕರಾದ ಗುರುರಾಜ ದೇಶಪಾಂಡೆಯವರು ಸ್ವಾಗತಿಸಿದರು. ಶ್ರೀಮತಿ ವಿಜಯಲಕ್ಷ್ಮಿ ಅಧ್ಯ ಆಭಾರ ಮನ್ನಿಸಿ, ಇನ್ನೂ ಹೆಚ್ಚಿನ ಚರ್ಚೆಗೆ ಅವಕಾಶ ಮಾಡಿಕೊಡುವುದಾಗಿ ಹೇಳಿದರು.

ರೈಲ್ವೆ ದರ ಏರಿಕೆ ಖಂಡನೆ

ಕೇಂದ್ರವು ರೈಲ್ವೆ ಬಜೆಟ್‌ನಲ್ಲಿ ಪ್ರಯಾಣದ ದರವನ್ನು ಹೆಚ್ಚಿಸಿರುವುದನ್ನು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಸೆಕ್ರೆಟೆರಿಯೇಟ್ ತೀವ್ರವಾಗಿ ಖಂಡಿಸಿದೆ. ಈಗಾಗಲೇ ಬೆಲೆ ಏರಿಕೆಯಿಂದ ತತ್ತರಿಸುತ್ತಿರುವ ಜನಸಾಮಾನ್ಯರ ಮೇಲೆ ಈ ರೈಲ್ವೆ ದರ ಏರಿಕೆ ಮತ್ತೊಂದು ಪ್ರಹಾರವಾಗಿದೆ ಎಂದು ಸಿ. ಪಿ ಐ. (ಎಂ) ಸೆಕ್ರೆಟೇರಿಯೇಟ್ ಹೇಳಿಕೆಯೊಂದರಲ್ಲಿ ತಿಳಿಸಲಾಗಿದೆ.

"ಈ ಉದ್ದೇಶಿತ ರೈಲ್ವೆ ಬಜೆಟ್‌ನಿಂದಾಗಿ ಹಣದುಬ್ಬರ ಮತ್ತು ಬೆಲೆ ಏರಲು ದಾರಿಯಾಗುವದು. ಐ. ಎಂ. ಎಫ್. ಸಾಲದ ಷರತ್ತುಗಳನ್ವಯ ರೈಲ್ವೆ ಸರಕು ಸಾಗಾಣಿಕೆ ದರ, ಪ್ರಯಾಣದ ದರ, ಅಂಚೆ-ತಂತಿ, ಟೇಲಿಫೋನ್ ದರ ಹೆಚ್ಚಳವಾಗಿರುವುದು ನಿಚ್ಚಳ."

ರೈಲ್ವೆ ಖಾತೆ, ದಿನನಿತ್ಯ ಸಂಭವಿಸುವ ಭೀಕರ ರೈಲು ಅಪಘಾತಗಳ ಕಡೆಗೆ ಕಿಂಚಿತ್ತು ಗಮನ ಕೊಡದೇ ಕೇವಲ ಬೆಲೆ ದ್ವಿಗುಣಗೊಳಿಸುವಲ್ಲಿ ಮಾತ್ರ ಚುರುಕಾಗಿದೆ.

ರೈಲ್ವೆ ಪ್ರಯಾಣ ದರ ಹೆಚ್ಚಿಸಿರುವುದನ್ನು ತೀವ್ರವಾಗಿ ಖಂಡಿಸುತ್ತಾ, ಎಲ್ಲ ಪ್ರಜಾಪ್ರಭುತ್ವ ಶಕ್ತಿಗಳು ಕೇಂದ್ರದ ಕ್ರಮವನ್ನು ವಿರೋಧಿಸಲು ಮುಂದೆ ಬರಬೇಕೆಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯಸೆಕ್ರೆಟೇರಿಯೇಟ್ ಮನವಿ ಮಾಡಿದೆ.

ಮಹಿಳೆಯರ ಮೇಲೆ ನಡೆಯುವ ದಬ್ಬಾಳಿಕೆಯನ್ನು ವಿರೋಧಿಸಿ !

ದೇಶದ್ಯಂತ ಮಹಿಳೆಯರ ಮೇಲೆ ದಬ್ಬಾಳಿಕೆ ನಡೆಯುತ್ತಿದ್ದು, ಸರ್ವರೂ ಈ ದಬ್ಬಾಳಿಕೆ, ಅತ್ಯಾಚಾರವನ್ನು ತಡೆಯಲು ಮುಂದಾಗಬೇಕೆಂಬ ಮನವಿಯನ್ನು ಬೆಳಗಾವಿಯಲ್ಲಿ ನಡೆದ ಮಹಿಳೆಯರ ಅಧಿವೇಶನದಲ್ಲಿ ಮಾಡಲಾಯಿತು.

ಫೆಬ್ರವರಿ 20 ರಂದು ಬೆಳಗಾವಿಯಲ್ಲಿ ಮಹಿಳೆಯರ ಸಮಸ್ಯೆಗಳ ಕುರಿತು ಸಮ್ಮೇಳನವೊಂದು ನಡೆಯಿತು.

ಜನತಾ ಪಕ್ಷದ ಶ್ರೀಮತಿ ಲೀಲಾವತಿ ಪ್ರಸಾದರು ಅಧ್ಯಕ್ಷತೆ ವಹಿಸಿದ್ದರು ಮುಂಬಯಿಯ ಮಹಿಳಾ ಫೆಡರೇಶನ್ ಸೆಕ್ರೆಟರಿ ಶ್ರೀಮತಿ ತಾರಾ ರೆಡ್ಡಿ (ಸಿ. ಪಿ. ಐ.), ಮಾಜಿ ಲೋಕಸಭೆ ಸದಸ್ಯರೂ ಮಾರ್ಕ್ಸ್‌ವಾದಿ ಮುಖಂಡರಾದ ಶ್ರೀಮತಿ ಅಹಲ್ಯಾ ರಾಂಗಣೇಕರ ಹಾಗೆಯೇ ಮುಸ್ಲಿಂ ಮಹಿಳೆಯರು ಸಿನಿಮಾ ನೋಡಲಾರದೆಂಬ ಪ್ರತಿಬಂಧನದ ವಿರುದ್ಧ ಧೈರ್ಯದಿಂದ ಹೋರಾಡಿದ ಬಿಜಾಪುರದ ಶಿಕ್ಷಕಿ ಶ್ರೀಮತಿ ನಜಮಾ ಭಾಂಗಿಯವರೆಲ್ಲ ಭಾಷಣ ಮಾಡಿ ಮಹಿಳೆಯರ ವಿರುದ್ಧ ಅನ್ಯಾಯದ ಪರ್ವತವೇ ನಿರ್ಮಾಣವಾಗಿದೆ. ಇಂಥ ಅನ್ಯಾಯಗಳ ವಿರುದ್ಧ ಹೋರಾಡಿಯೇ ಮಹಿಳೆ ವಿಮೋಚನೆ ಸಾಧಿಸಬಲ್ಲಳು, ಕಾಯಿದೆ-ಕಾನೂನುಗಳನ್ನು ಮಹಿಳೆಯರು ಪುರುಷರ ಸರಿಸಮಾನರೆಂದು ಘೋಷಿಸಲ್ಪಟ್ಟಿದ್ದರೂ ಕೂಡ ಮಹಿಳೆಯರು ಹರಿಜನ–ಗಿರಿಜನ ಸ್ತ್ರೀಯರು ಅಮಾನುಷ ರೀತಿಯಿಂದ ಅತ್ಯಾಚಾರಕ್ಕೆ ತುತ್ತಾಗಿರುವ ಕರುಣಾಜನಕ ಕತೆಗಳನ್ನು ವಿವರಿಸಿ, ಇವೆಲ್ಲ ಹೋಗಬೇಕಾದರೆ, ಮಹಿಳೆ ತಲೆ ಎತ್ತಿ ಜೀವಿಸಬೇಕಾದರೆ ಈಗಿರುವ ಬಂಡವಾಳಶಾಹಿ ವ್ಯವಸ್ಥೆಯನ್ನು ಕಿತ್ತೊಗೆಯುವುದು ಅತ್ಯಗತ್ಯವೆಂದು ಒತ್ತಿ ಹೇಳಿ, ದುಡಿಯುವ ಹಾಗೂ ಸುರಕ್ಷಿತ ಮಹಿಳೆಯರು ಬಲವಾದ ಸಂಘಟನೆ ಕಟ್ಟಿ ಸಾಮಾಜಿಕ ವ್ಯವಸ್ಥೆಯ ಪೂರ್ತಿ ಬದಲಾವಣೆಗಾಗಿ ದುಡಿಯಬೇಕೆಂದು ಕರೆ ಕೊಟ್ಟರು.

ಭಾಷಾ ಗೊಂದಲಕ್ಕೊಳಗಾಗಿರುವ ಬೆಳಗಾವಿಯಲ್ಲಿ ಇಂಥ ಮಹಿಳೆಯರ ಸಮಾವೇಶ ಏರ್ಪಡಿಸಿದ್ದು ಸ್ವಾಗತಾರ್ಹ. ಕರ್ನಾಟಕ ರಾಜ್ಯದಲ್ಲಿ ಮಹಿಳೆಯರ ಸಂಘಟನೆ ಹೇಳಿಕೊಳ್ಳುವಷ್ಟು ಬೆಳೆಯದಿರುವುದರಿಂದ, ಕೆಲವು ಜಿಲ್ಲೆಗಳಲ್ಲಿ ಅದರ ಗಂಧವೇ ಇಲ್ಲದಿರುವಾಗ, ಎಡ ಮತ್ತು ಪ್ರಜಾಪ್ರಭುತ್ವ ಪಾರ್ಟಿಗಳು, ರೈತ ಕಾರ್ಮಿಕ ಸಂಘಟನೆಗಳ ಸಹಾಯದಿಂದ ಇಂಥ ಸಮಾವೇಶ ನಡೆಸಿ, ಮಹಿಳೆಯರಲ್ಲಿ– ದುಡಿಯುವ ಹಾಗೂ ವಿದ್ಯಾವಂತ ಮಹಿಳೆಯರಲ್ಲಿ ಜಾಗೃತಿಯನ್ನುಂಟು ಮಾಡಬೇಕು, ಇಂದಿರಾ ಗಾಂಧಿ ಬಡವರ ತಾಯಿ ಎಂಬ ಭಾವನೆ ಮಹಿಳೆಯರಲ್ಲೇ ಹೆಚ್ಚು ಪ್ರಚಲಿತವಿದ್ದು, ಅದನ್ನು ಅಳಿಸಲು ಇಂಥ ಸಮಾವೇಶಗಳು ಅತ್ಯಗತ್ಯ.


—

ಕಾಂ। ಎ. ಕೆ. ಜಿ. ವರ್ಧಂತಿ

ಶ್ರಮಜೀವಿಗಳ ದಿಟ್ಟ ಹೋರಾಟಗಾರರಾದ ದಿವಂಗತ ಕಾಂ। ಎ. ಕೆ. ಗೋಪಾಲನ್‌ರ 5ನೇ ವರ್ಧಂತಿ ದಿನಾಚರಣೆಯ (22-3-82) ಅಂಗವಾಗಿ ಬೆಂಗಳೂರಿನ ಯಶವಂತಪುರದ 'ಜೈನ್ ಚಾರಿಟಿ ಹಾಲ್'ನಲ್ಲಿ ವಿಚಾರಗೋಷ್ಠಿ ಮತ್ತಿತರ ಕಾರ್ಯಕ್ರಮಗಳು ನಡೆಯಲಿವೆ.

'ವಿಜ್ಞಾನ ಹಾಗೂ ಸಾಮ್ರಾಜ್ಯಶಾಹಿ' ಎಂಬ ವಿಷಯದ ಕುರಿತಾಗಿ ನಡೆಯಲಿರುವ ವಿಚಾರಗೋಷ್ಠಿಯಲ್ಲಿ ಪ್ರೊ।ಎ. ಕೆ. ಎನ್ ರೆಡ್ಡಿ (IISC) ಪ್ರೊ। ವಾಸು (IISC), ಡಾ। ಜಿ. ರಾಮಕೃಷ್ಣ, ಡಾ। ಎಂ.ಪಿ. ಪರಮೇಶ್ವರನ್ ಮುಂತಾದವರು ಭಾಗವಹಿಸಲಿದ್ದಾರೆ.

ಈ ಸಂದರ್ಭದಲ್ಲೇ ದಿವಂಗತ ಕಾಂ। ಎ. ಕೆ. ಜಿ. ಯವರ ಆತ್ಮಚರಿತ್ರೆಯ ಕನ್ನಡ ಅನುವಾದ ಪುಸ್ತಕವನ್ನು ಬಿಡುಗಡೆ ಮಾಡಲಾಗುವುದು.



ಕಾರ್ಯಕ್ರಮದ ಅಂಗವಾಗಿ ಸಮುದಾಯ ತಂಡದವರಿಂದ ಸಾಂಸ್ಕೃತಿಕ ಕಾರ್ಯಕ್ರಮವೂ ನಡೆಯಲಿದೆ.

ಕಾರ್ಯಕ್ರಮದಲ್ಲಿ ಪಾಲ್ಗೊಂಡು ಯಶಸ್ವಿಮಾಡಬೇಕೆಂದು ಎ. ಕೆ. ಜಿ. ವರ್ಧಂತಿ ದಿನಾಚರಣೆಯ ಕುರಿತಾಗಿ ರಚಿತವಾದ ಕಮಿಟಿಯ ಛೇರ್‌ಮನ್‌ರಾದ ಡಾ॥ ಪ್ರಕಾಶ್. ಸಿ. ರಾವ್ ವಿನಂತಿಸಿದ್ದಾರೆ.

ಅಭೂತ ಪೂರ್ವ

ಕೋಲಾರ ಬಂದ್

ಮನಬಂದಂತೆ ವರ್ತಿಸುತ್ತಿರುವ ಕೋಲಾರದ ಡಿ. ವೈ. ಎಸ್. ಪಿ. ಹರಿಕೃಷ್ಣರವರ ಅನುಚಿತ ವರ್ತನೆ ಹಾಗೂ ಕೆ. ಜಿ. ಎಫ್. ಶಾಸಕ ಸಿ. ಎಂ. ಆರ್ಮುಗಂರ ಪತ್ರಿಕಾ ವಿರೋಧಿ ನೀತಿ ಪ್ರತಿಭಟಿಸಿ ಫೆಬ್ರವರಿ 26 ರಂದು ಕೋಲಾರ ಜಿಲ್ಲೆಯಾದ್ಯಂತ ಬಂದ್ ಆಚರಿಸಲಾಯಿತು.

ವಿವಿಧ ರಾಜಕೀಯ ಪಕ್ಷಗಳು, ಪ್ರಗತಿ ಪರ ವೇದಿಕೆಗಳು, ವಿದ್ಯಾರ್ಥಿ ಸಮೂಹಗಳು ಈ ಬಂದ್‌ಗೆ ಬೆಂಬಲ ನೀಡಿದ್ದವು. ದಲಿತ ಸಂಘರ್ಷ ಸಮಿತಿ ಹಾಗೂ ಕಾರ್ಮಿಕ ಒಕ್ಕೂಟಗಳು ಕೋಲಾರ ನಗರದಲ್ಲಿ ಮೆರವಣಿಗೆ ಹೊರಡಿಸಿ ಬಂದ್‌ಗೆ ಬೆಂಬಲಿಸುವಂತೆ ಕೋರಿದ್ದವು.

'ಬಂದ್'ಗೆ ಯಾರೂ ಸಹಕರಿಸಬೇಡಿ, ಅಂಗಡಿ, ಹೋಟೆಲ್‌ಗಳನ್ನು ತೆರೆಯಿರಿ, ನಾವು ಎಲ್ಲಾ ತರಹ ರಕ್ಷಣೆ ನೀಡುತ್ತೇವೆ ಎಂದು ಪೋಲೀಸ್ ಜೀಪಿನ ಧ್ವನಿವರ್ಧಕದ ಮೂಲಕ ಅವಿರತ ಶಂಖವಾದ್ಯ ಮೊಳಗಿದ್ದರೂ ಜಿಲ್ಲೆಯ ನಾಗರಿಕರು ಕಿವಿಗೊಡದೇ ಬಂದನ್ನು ಸಫಲಗೊಳಿಸಿದ್ದಾರೆ.

ಬಂಗಾರಪೇಟೆ, ಮುಳಬಾಗಿಲು, ಕೋಲಾರ, ಚಿಂತಾಮಣಿ ಮೊದಲಾದ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲೂ ಬಂದ್ ಯಶಸ್ವಿಯಾಗಿ ನಡೆದಿದೆ.

ಬಂದ್ ಯಶಸ್ವಿಯಾಗಲು ಸಹಕರಿಸಿದ ವಾಣಿಜೋದ್ಯಮಿಗಳಿಗೆ, ಸಾರ್ವಜನಿಕರಿಗೆ ಕಾರ್ಮಿಕ ನಾಯಕ ಆರ್. ವೆಂಕಟರಾಮಯ್ಯ ಕೃತಜ್ಞತೆ ಸಲ್ಲಿಸಿದ್ದಾರೆ.

('ಹೊನ್ನುಡಿ' ಕೃಪೆ)

ಸಾದರ ಸ್ವೀಕಾರ

○ ಸಮಾಜವಾದವೇ ಏಕೆ (ನಾರ್ದರ್ನ್ ನೇಬರ್ಸ್ ನಿಯತಕಾಲಿಕದ ಸಿಬ್ಬಂದಿ ಸಿದ್ಧಪಡಿಸಿದ ಸಂಕ್ಷಿಪ್ತ ಉತ್ತರಗಳು). ಪ್ರಕಾಶಕರು : ನವಕರ್ನಾಟಕ ಪಬ್ಲಿಕೇಷನ್ಸ್; ಬೆಲೆ: 1ರೂ; ದ್ವಿತೀಯ ಮುದ್ರಣ.

○ ಕಾರ್ಲ್‌ಮಾರ್ಕ್ಸ್ (ಸಂಕ್ಷಿಪ್ತ ಜೀವನ ಚರಿತ್ರೆ) ಲೇ: ಇ. ಸ್ತೆಪನೋವಾ; ಅನು: ಸೌರಭ; ಪ್ರಕಾಶಕರು: ನವಕರ್ನಾಟಕ ಪಬ್ಲಿಕೇಷನ್ಸ್; ಬೆಲೆ ರೂ. 3-50; ದ್ವಿತೀಯ ಮುದ್ರಣ.

○ ಇಂದಿನ ಶಿಕ್ಷಣ ಪದ್ಧತಿ ಅಸಂಗತ ಅವೈಜ್ಞಾನಿಕ. ಲೇ: ಬಿ. ಭಾಸ್ಕರರಾವ್; ಪ್ರಕಾಶಕರು: ನವಕರ್ನಾಟಕ ಪಬ್ಲಿಕೇಷನ್ಸ್; ಬೆಲೆ: ರೂ. 6-50.

○ ಕರ್ನಾಟಕ ಏಕೀಕರಣ (ಭಾರತ ಕಮ್ಯುನಿಸ್ಟ್ ಪಕ್ಷದ ಪ್ರಕಟನೆ). ಅಧಿಕೃತ ಮಾರಾಟಗಾರರು: ನವಕರ್ನಾಟಕ ಪಬ್ಲಿಕೇಷನ್ಸ್; ಬೆಲೆ: 0-75 ಪೈಸೆ.

○ ವಾನರನಿಂದ ಮಾನವನ ವರೆಗೆ. ಲೇ: ಫ್ರೆಡರಿಕ್ ಎಂಗೆಲ್ಸ್; ಅನು: ಡಾ॥ ಜಿ. ರಾಮಕೃಷ್ಣ; ಪ್ರಕಾಶಕರು: ನವಕರ್ನಾಟಕ ಪಬ್ಲಿಕೇಷನ್ಸ್; ಬೆಲೆ: 0-75 ಪೈಸೆ; ದ್ವಿತೀಯ ಮುದ್ರಣ.

○ ಗ್ರಾಮೀಣ ಪ್ರದೇಶಗಳಲ್ಲಿ ವರ್ಗ ಸಂಘರ್ಷ ಮತ್ತು ಜಾತಿ ವೈಷಮ್ಯ. ಲೇ: ಎಸ್. ಜಿ ಸರ್ದೇಸಾಯಿ; ಅನು: ಸಿ. ಸೀತಾರಾಮ್; ಪ್ರಕಾಶಕರು: ನವಕರ್ನಾಟಕ ಪಬ್ಲಿಕೇಷನ್ಸ್; ಬೆಲೆ: 2 ರೂ.

○ ಭಾರತೀಯ ತತ್ವಜ್ಞಾನ-ವೈಚಾರಿಕ ಮತ್ತು ಸಾಮಾಜಿಕ ಸಂಘರ್ಷ. ಲೇ: ಎಸ್. ಜಿ. ಸರ್ದೇಸಾಯಿ; ಅನು: ಗೌರೀಶ ಕಾಯ್ಕಿಣಿ; ಪ್ರಕಾಶಕರು: ನವಕರ್ನಾಟಕ ಪಬ್ಲಿಕೇಷನ್ಸ್; ಬೆಲೆ: ರೂ. 10.

○ ಕಮ್ಯೂನಿಸಂ. ಲೇ: ಬಿ. ವಿ. ಕಕ್ಕಿಲ್ಲಾಯ; ಪ್ರಕಾಶಕರು: ನವಕರ್ನಾಟಕ ಪಬ್ಲಿಕೇಷನ್ಸ್ ಬೆಲೆ: ರೂ. 1–75; ತೃತೀಯ ಮುದ್ರಣ.

○ ಸಂಕ್ಷಿಪ್ತ ರಾಜಕೀಯ ಅರ್ಥಶಾಸ್ತ್ರ. ಲೇ: ಲೆವ್ ಲಿಯೋನ್‌ತ್ಯೆವ್; ಅನು: ಕೆ. ಎಲ್. ಗೋಪಾಲಕೃಷ್ಣರಾವ್; ಪ್ರಗತಿ ಪ್ರಕಾಶನ; ಬೆಲೆ: ರೂ. 3; ಅಧಿಕೃತ ಮಾರಾಟಗಾರರು: ನವಕರ್ನಾಟಕ ಪಬ್ಲಿಕೇಷನ್ಸ್.

○ ಕಮ್ಯೂನಿಸ್ಟ್ ಸಮಾಜದ ಕುರಿತು (ಮಾರ್ಕ್ಸ್, ಎಂಗೆಲ್ಸ್ ಮತ್ತು ಲೆನಿನ್‌ರ ಲೇಖನಗಳ ಸಂಗ್ರಹ). ಅನು: ಕೆ. ಎಲ್. ಗೋಪಾಲಕೃಷ್ಣರಾವ್; ಪ್ರಕಾಶಕರು: ಪ್ರಗತಿ–ಪ್ರಕಾಶನ ಮಾಸ್ಕೋ; ಬೆಲೆ: ರೂ. 2-25; ಅಧಿಕೃತ ಮಾರಾಟಗಾರರು: ನವಕರ್ನಾಟಕ ಪಬ್ಲಿಕೇಷನ್ಸ್.

○ ಅಜ್ಜನ ಮನೆಗೆ ಹೋದಾಗ (ಮಕ್ಕಳ ಪುಸ್ತಕ) ಲೇ: ಎನ್. ನೋಸೋವ್; ಅನು: ಗೋಪಾಲ್ ಕೃಷ್ಣರಾವ್; ಪ್ರಗತಿ ಪ್ರಕಾಶನ ಮಾಸ್ಕೋ; ಬೆಲೆ: ರೂ. 2–50. ಅಧಿಕೃತ ಮಾರಾಟಗಾರರು: ನವಕರ್ನಾಟಕ ಪಬ್ಲಿಕೇಷನ್ಸ್.

ಅಧಿಕಾರಿಗಳ ದೌರ್ಜನ್ಯದ ಬಗ್ಗೆ ಖಂಡನೆ

ನೌಕರರಿಗೆ ಮತ್ತು ಸಾರ್ವಜನಿಕರಿಗೆ ಅಪಾರ ತೊಂದರೆ ಕೊಡುತ್ತಿರುವ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ॥ ಮಹದೇವಪ್ಪ ಮತ್ತು ಹುಳಿಯೂರು ಕೇಂದ್ರದ ಡಾ॥ ಚೆಲುವರಾಜು ಇವರ ವರ್ತನೆ ಬಗ್ಗೆ ಪ್ರತಿಭಟಿಸಿ 2-3-82 ರಂದು ಚಿಕ್ಕನಾಯಕನಹಳ್ಳಿ ಆರೋಗ್ಯ ಕೇಂದ್ರದ ಎದುರು ರಾಜ್ಯ ಆರೋಗ್ಯ ಕಾರ್ಯಕರ್ತರ ತುಮಕೂರು ಜಿಲ್ಲಾ ಘಟಕದ ಆಶ್ರಯದಲ್ಲಿ ಧರಣಿ ಸತ್ಯಾಗ್ರಹ ನಡೆಯಿತು.

ಈ ವಿಷಯ ತಿಳಿದೊಡನೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಜಿಲ್ಲಾ ಮಲೇರಿಯ ಅಧಿಕಾರಿಗಳು, ತಿಪಟೂರಿನ ಉಪ-ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಚಿಕ್ಕನಾಯಕನಹಳ್ಳಿ ಪೋಲೀಸ್ ಸಬ್-ಇನ್‌ಸ್ಪೆಕ್ಟರು, ತಾಲ್ಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷರು, ಸಂಘದ ಪದಾಧಿಕಾರಿಗಳು ಮತ್ತು ಚಿಕ್ಕನಾಯಕನಹಳ್ಳಿ ಪ್ರಮುಖರು ಧರಣಿ ನಡೆಯುತ್ತಿದ್ದ ಸ್ಥಳಕ್ಕೆ ಆಗಮಿಸಿ ವಿಷಯ ಪರಿಶೀಲಿಸಿದರು. ನಂತರ ವೈದ್ಯಾಧಿಕಾರಿಗಳ ವರ್ತನೆ ಮಿತಿಮೀರಿರುವುದು ಸತ್ಯವೆಂದು ಕಂಡು ಬಂದದ್ದರಿಂದ ಅವರನ್ನು ಖಂಡಿಸಿದರು.

ಆರೋಗ್ಯ ಕಾರ್ಯಕರ್ತರ ಬಗ್ಗೆ ಇಲ್ಲಸಲ್ಲದ ಆರೋಪಗಳನ್ನು ಇಲಾಖೆಗೂ, ಸರ್ಕಾರಕ್ಕೂ ಬರೆಯುವುದಕ್ಕೆ ಛೀಮಾರಿ ಹಾಕಲಾಯಿತು, ನೌಕರರ ಕುಂದುಕೊರತೆಗಳನ್ನು ತಕ್ಷಣ ಗಮನಿಸುವುದಾಗಿ, ಭರವಸೆ ನೀಡಿದ ಮೇಲೆ ಮತ್ತು ವೈದ್ಯಾಧಿಕಾರಿಗಳು ಕ್ಷಮಾಪಣೆ ಕೇಳಿದ ನಂತರ ಧರಣಿ ಸತ್ಯಾಗ್ರಹ 3-3-82 ರ ಬೆಳಗಿನ ಜಾವ ಮುಕ್ತಾಯಗೊಳಿಸಲಾಯಿತು.

ಈ ಸತ್ಯಾಗ್ರಹದಲ್ಲಿ ಸಹಕರಿಸಿದವರಿಗೆಲ್ಲ ಸಂಘದ ಅಧ್ಯಕ್ಷ ದಸ್ತಗೀರ್ ಸಾಹೇಬರು ವಂದನೆ ಸಲ್ಲಿಸಿದ್ದಾರೆ.

ಡಿವೈಎಫ್‌ಐ ನೇತೃತ್ವದಲ್ಲಿ ಧರಣಿ ಸತ್ಯಾಗ್ರಹ

27-2-82ರಂದು ಶಿವಮೊಗ್ಗೆಯಲ್ಲಿ ಡಿವೈಎಫ್‌ಐ ಘಟಕದ ಅಧ್ಯಕ್ಷ ಬಿ. ತಿರುಕಪ್ಪನವರ ನೇತೃತ್ವದಲ್ಲಿ ಧರಣಿ ಸತ್ಯಾಗ್ರಹ ನಡೆಯಿತು. ನಗರದ ಜನತೆಗೆ ಶುದ್ಧ ನೀರನ್ನು ಕುಡಿಯಲು ಒದಗಿಸಬೇಕು, ಸೊಳ್ಳೆ ನಾಶಕಗಳನ್ನು ಸಿಂಪಡಿಸಬೇಕು, ಮೀಟರ್ ಹಾಕುವವರಿಗೆ ರೀಡಿಂಗ್ ಚಾರ್ಜನ್ನು ವಸೂಲು ಮಾಡಬಾರದು ಮುಂತಾದ ವಿಷಯಗಳಿಗೆ ಒತ್ತಾಯಿಸಿ ನಗರಸಭೆಯ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ಈ ವಿಷಯಗಳ ಕುರಿತು ಚರ್ಚಿಸಿದ ಅಧಿಕಾರಿಗಳು ಸಮಸ್ಯೆಗಳನ್ನು ಪರಿಹರಿಸಲು ಯತ್ನಿಸುವುದಾಗಿ ಭರವಸೆ ನೀಡಿದರು. ಈ ಧರಣಿ ಸತ್ಯಾಗ್ರಹದಲ್ಲಿ 40 ಜನ ಸಂಗಾತಿಗಳು ಭಾಗವಹಿಸಿದ್ದರು.

ರೈತರ ಹೋರಾಟ ಇಡೀ ಪ್ರಜಾಪ್ರಭುತ್ವ ಹೋರಾಟದ ಅವಿಭಾಜ್ಯ ಅಂಗ

(ಒಂದನೇ ಪುಟದಿಂದ)

ಕಾರಣರಾದ ಸರ್ವ ಕಾಂಗ್ರೆಸ್ಸಿಗರ ವಿರುದ್ಧ ಅತ್ಯಂತ ವಿಶಾಲವಾದ, ರೀತಿಯಲ್ಲಿ ಐಕ್ಯದಿಂದ ಸಿಡಿದೇಳಬೇಕಾಗಿರುವುದರಿಂದ, ಬಲಿಷ್ಠ ಸಂಘಟನೆ ಕಟ್ಟಲು ಕರೆ ನೀಡಿದರು.

ರೈತರಿಗೂ ಕೂಡ ಸ್ವಾತಂತ್ರ್ಯದಿಂದ ಪ್ರಯೋಜನವಾಗಿಲ್ಲ. ಅವರ ಜೀವನ ಅತಿ ಕಷ್ಟಕ್ಕೀಡಾಗಿಂದು, ಅತಿಶಯ ಬೆಲೆ ಕೊಟ್ಟು ಬೀಜ, ಕ್ರಿಮಿನಾಶಕ, ಗೊಬ್ಬರ ಹಾಕಿ ಬೆಳೆಸಿದ ಬೆಳೆಗೆ ಮಾರು ಕಟ್ಟೆಯಲ್ಲಿ ಬಡ-ಮಧ್ಯಮ ವರ್ಗದ ರೈತರಿಗೆ ಅತ್ಯಂತ ಕಡಿಮೆ ಬೆಲೆ ಸಿಗುತ್ತಿರುವುದು ದುರದೃಷ್ಟಕರವೆಂದೂ, ಇದರ ವಿರುದ್ಧ ಹೋರಾಡಬೇಕೆಂದು ಇ. ಎಂ. ಎಸ್. ಹೇಳಿದರು.

ಕರ್ನಾಟಕದಲ್ಲಿ ಇತ್ತೀಚೆಗೆ ನಡೆದ ಹೋರಾಟಗಳ ಕುರಿತು ಹೊಗಳಿದ ಕಾಂ| ಇ.ಎಂ.ಎಸ್. ಅವರು, ಸಮ್ಮೇಳನ ರೈತ-ಕಾರ್ಮಿಕ ಹೋರಾಟಕ್ಕೆ ಮಾರ್ಗದರ್ಶನವಾಗಲೆಂದು ಹಾರೈಸಿದರು.

ಕರ್ನಾಟಕ ಪ್ರಾಂತ ರೈತ ಸಂಘದ 7ನೇ ಸಮ್ಮೇಳನ ಮುಳಬಾಗಿಲಿನಲ್ಲಿ ತಾ|| 11ರಿಂದ 14ರ ವರೆಗೆ ನಡೆಯಲಿದ್ದು 11 ರಂದು ಸಂಜೆ ಮೆರವಣಿಗೆ ನಂತರ ಕಾಂ| ಮುಗವಾಳಪ್ಪನವರ ಅಧ್ಯಕ್ಷತೆಯಲ್ಲಿ ಸಮ್ಮೇಳನ ಪ್ರಾರಂಭವಾಯಿತು. ರೈತ ಸಂಘದ ಹಿರಿಯ ನಾಯಕರಾದ ಕಾಂ| ವೆಂಕಟರಾಮಯ್ಯನವರು ಪ್ರಾರಂಭದಲ್ಲಿ ಧ್ವಜಾರೋಹಣ ಮಾಡಿದರು.

(ಪೂರ್ತಿ ವಿವರ ಮುಂದಿನ ವಾರ)

ಕೇಂದ್ರ ನೌಕರರ ವೇತನ ಸ್ಥಂಭನಕ್ಕೆ ವಿರೋಧ

ಆರ್ಥಿಕ ಮುಗ್ಗಟ್ಟಿನ ನೆವ ಮುಂದೆ ಮಾಡಿ, ತುಟ್ಟಿ ಭತ್ತೆಯ ಕೊಡುಗೆಯನ್ನು ಮುಂದೆ ಹಾಕಿ, ಮನೆ ಬಾಡಿಗೆ, ಸಿಟಿ ಅಲ್ಲೋಯನ್ಸ್‌ಗಳನ್ನು ಕೂಡಿಡುವ ಕೇಂದ್ರ ಸರ್ಕಾರದ ನಿಲುವೆಯನ್ನು ಕೇಂದ್ರ ಸರ್ಕಾರಿ ನೌಕರದಾರರು ಬಲವಾಗಿ ವಿರೋಧಿಸುತ್ತಿರುವುದನ್ನು ಸಿ ಐ ಟಿಯು ಅಧ್ಯಕ್ಷರಾದ ಶ್ರೀ ಬಿ. ಟಿ. ರಣದಿವೆ, ಹಾಗೂ ಪ್ರ. ಕಾರ್ಯದರ್ಶಿ ಕಾ| ರಾಮಮೂರ್ತಿಯವರು ಅಭಿನಂದಿಸಿದ್ದಾರೆ. ಮೂರು ಕಂತಿನ ತುಟ್ಟಿಭತ್ತೆ ಹಾಗೂ ಇತರ ಬೇಡಿಕೆಗಳ ಕುರಿತು, ನೌಕರದಾರರ ಫೆಡರೇಶನಿನ ಜೊತೆಯಲ್ಲಿ ಚರ್ಚೆ ಮಾಡುತ್ತಿದ್ದೇವೆಂದು ಆರ್ಥಿಕ ಮಂತ್ರಿಯವರು ಲೋಕಸಭೆಯಲ್ಲಿ ಹೇಳಿದ್ದರೂ ಕೂಡ, ಕೆಲವು ಮುಖಂಡರು ಸರ್ಕಾರದ ಜೊತೆಯಲ್ಲಿ ಒಪ್ಪಂದ ಮಾಡಿಕೊಳ್ಳುವ ಸಂಚು ಹೂಡುತ್ತಿದ್ದರೆಂದೂ, ಇದನ್ನು ಎಚ್ಚರಿಕೆಯಿಂದ ಗಮನಿಸಬೇಕೆಂದೂ ಕರೆ ಕೊಟ್ಟಿದ್ದಾರೆ.

ಕೇಂದ್ರ ಸರ್ಕಾರದ ಒಳಸಂಚಿಗೆ ಬಲಿಯಾಗಬಾರದೆಂದು ಎಚ್ಚರಿಸಿದ, ಸಿ. ಐ. ಟಿ. ಯು ಮುಖಂಡರು, ಕೇಂದ್ರ ನೌಕರದಾರರ ಫೆಡರೇಷನ್, ಸಿಐಟಿ ಮುಖಂಡರು, ರಕ್ಷಣಾ ಖಾತೆಯ ನೌಕರದಾರರೆಲ್ಲ ಹಾಗೆಯೇ ರೈಲ್ವೆ ಫೆಡರೇಶನಿನ (ಎ. ಐ. ಆರ್. ಎಫ್.) ಕೆಲವು ಮುಖ್ಯರೆಲ್ಲ, ಕೇಂದ್ರ ಸರ್ಕಾರ ಹಾಗೂ ನೌಕರದಾರರೊಳಗೆ ಒಪ್ಪಂದವಾಗಿದೆ ಎಂಬ ಹೇಳಿಕೆಯನ್ನು ಖಂಡಿಸಿರುವುದನ್ನು ಸ್ವಾಗತಿಸಿದ್ದಾರೆ.

ನಮ್ಮ ದೇಶದ ದುಡಿಯುವ ಜನತೆಯ ಹಿತದ ದೃಷ್ಟಿಯಿಂದ, ಕಾರ್ಮಿಕ ವರ್ಗ, ಕೇಂದ್ರ ಸರ್ಕಾರಿ ನೌಕರದಾರರಿಗೆ ಎಲ್ಲ ತರದ ಸಹಾಯ ನೀಡಲು ಮುಂದೆ ಬರಬೇಕೆಂದುಕರೆಕೊಟ್ಟಿದ್ದಾರೆ.

ಬಸ್ ದರ ಏರಿಕೆ ಅನುಚಿತ

ರಾಜ್ಯ ಸರ್ಕಾರ ಬಸ್ ದರ ಏರಿಸುವ ತೀರ್ಮಾನ ಮಾಡಿದ್ದು ಯೋಗ್ಯವಲ್ಲ ಎಂದು ಸಿ. ಪಿ. ಐ. (ಎಂ) ರಾಜ್ಯ ಸಮಿತಿ ಕಾರ್ಯದರ್ಶಿ ಕಾಂ| ಎಂ. ಕೆ. ತಿಳಿಸಿದ್ದಾರೆ. ಈ ಕುರಿತು ಅವರು ಪತ್ರಿಕಾ ಹೇಳಿಕೆಯೊಂದನ್ನು ಬಿಡುಗಡೆ ಮಾಡಿದ್ದಾರೆ.

ರಾಜ್ಯ ಸರ್ಕಾರದ ಯೋಜನೆ ಕಾರ್ಯಗತವಾದಲ್ಲಿ ಮೊದಲೇ ಬೆಲೆ ಏರಿಕೆಯಿಂದ ತತ್ತರಿಸುತ್ತಿರುವ ಜನಸಾಮಾನ್ಯರು ಮತ್ತಷ್ಟು ತೊಂದರೆಗೀಡಾಗುವರೆಂದು ಕಾಂ| ಎಂ. ಕೆ. ತಿಳಿಸಿದ್ದಾರೆ.

ಕೇಂದ್ರ ಸರ್ಕಾರ ಇತ್ತೀಚೆಗೆ ತಾನೇ ರೇಲ್ವೆ ಪ್ರಯಾಣದರ, ಸರಕು ಸಾಗಣೆ ದರ ಹೆಚ್ಚಿಸಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ಈ ಯೋಜನೆ ಜನಸಾಮಾನ್ಯರನ್ನು ತುಂಬಾ ತೊಂದರೆಗೀಡುಮಾಡುತ್ತದೆ. ಪ್ರಯಾಣಿಕರ ಪ್ರಯಾಣ ಸೌಲಭ್ಯದ ಕುರಿತು ಕಿಂಚಿತ್ತು ಯೋಚಿಸದ ಸರ್ಕಾರ ಈಗ ದರ ಹೆಚ್ಚಿಸಲು ಹೊರಟಿದ್ದು ಅನುಚಿತ ಎಂದು ಎಂ.ಕೆ. ತಿಳಿಸಿದ್ದಾರೆ. ಸಾರಿಗೆ ಸಂಸ್ಥೆಯಲ್ಲಿ ಭ್ರಷ್ಟಾಚಾರ ಆಳವಾಗಿ ಬೇರು ಬಿಟ್ಟಿದ್ದು ಇದನ್ನು ತಡೆಯಲು ಸರ್ಕಾರ ಶ್ರಮ ವಹಿಸಿಲ್ಲ,

ಸಾರಿಗೆ ಸಂಸ್ಥೆಯ ಕಾರ್ಯ ನಿರ್ವಹಣೆಯಲ್ಲಿ ಅಪಾರ ಲೋಪದೋಷಗಳಿವೆ. ಈ ಅವ್ಯವಸ್ಥೆಯಿಂದಾಗಿ ಪ್ರಯಾಣಿಕರು ಸಾಕಷ್ಟು ಅನಾನುಕೂಲ ಅನುಭವಿಸುತ್ತಿದ್ದಾರೆ.

ಈ ಎಲ್ಲ ಅಂಶಗಳ ಕಡೆ ಗಮನ ಕೊಡದೇ ಸರ್ಕಾರ ಬಸ್ ದರ ಏರಿಸಲು ಹವಣಿಸಿರುವುದು ಖಂಡನೀಯ ಎಂದಿರುವ ಕಾಂ| ಎಂ. ಕೆ., ಸರ್ಕಾರದ ಈ ಕ್ರಮವನ್ನು ವಿರೋಧಿಸಲು ಎಲ್ಲ ಪ್ರಜಾಪ್ರಭುತ್ವ ಪ್ರೇಮಿಗಳು ಮುಂದಾಗಬೇಕೆಂದು ಕಾಂ| ಎಂ. ಕೆ. ಮನವಿ ಮಾಡಿದ್ದಾರೆ.

ಬೀಡಿ ಕಾರ್ಮಿಕರ ಮಹಾಸಭೆ

28-1-82 ರಂದು ದ.ಕ. ಜಿಲ್ಲೆಯ ಉಳ್ಳಾಲ ಒಂಬತ್ತು ಕೆರೆ ಸುಂದರಿ ಭಾಗ್ ಪ್ರದೇಶದ ಬೀಡಿ ಕಾರ್ಮಿಕರ ಮಹಾಸಭೆಯು ನಡೆಯಿತು. ಅಧ್ಯಕ್ಷತೆಯನ್ನು ಗಂಗಾಧರ ಶೆಟ್ಟಿಯವರು ವಹಿಸಿದ್ದರು.

ಸಭೆಯನ್ನುದ್ದೇಶಿಸಿ ಕಾಂ| ಯು. ಬಿ. ಮಾರಪ್ಪನವರು ಮಾತನಾಡುತ್ತಾ ಬೀಡಿ ಕಾರ್ಮಿಕರು ಒಂದೆಡೆ ಸರಕಾರದ ಮತ್ತು ಕಾಂಟ್ರ್ಯಾಕ್ಟ್‌ದಾರರ ಈ ರೀತಿ ಇಬ್ಬಗೆಯಿಂದ ತೊಂದರೆಗೀಡಾಗಿದ್ದಾರೆ. ಐಕ್ಯ ಹೋರಾಟದ ಮೂಲಕ ನ್ಯಾಯ ಪಡೆಯಲು ಸಾಧ್ಯ ಎಂದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಪದ್ಮನಾಭ ರಾವ್ ಮಾತನಾಡುತ್ತಾ ಒಗ್ಗಟ್ಟನ್ನು ಬಲಪಡಿಸಿಕೊಳ್ಳುವಂತೆ ಮನವಿ ಮಾಡಿದರು. ಉಳ್ಳಾಲ್ ಟೌನ್ ಪಂಚಾಯತ ಸದಸ್ಯ ಜಿ. ಎಸ್. ಉಳ್ಳಾಲ್ ಮಾತನಾಡಿ ಬೀಡಿ ಕಾರ್ಮಿಕರ ಮೇಲೆ ನಡೆಯುತ್ತಿರುವ ಶೋಷಣೆಯನ್ನು ಖಂಡಿಸಿದರು.

1981 ರ ಲೆಕ್ಕಪತ್ರವನ್ನು ಕಾರ್ಯದರ್ಶಿ ಬಿ. ಭಾಸ್ಕರ ಮಂಡಿಸಿದರು. ನಂತರ ನೂತನ ಸಾಲಿಗೆ ಹೊಸ ಸಮಿತಿಯನ್ನು ರಚಿಸಲಾಯಿತು.

ಕಡೆಗಣಿಸಲ್ಪಟ್ಟ ಕರ್ನಾಟಕ

(1ನೇ ಪುಟದಿಂದ)

ಕಾರ್ಖಾನೆಯ ಅಡಿಗಲ್ಲನ್ನಿಟ್ಟು ಆಶಾಂಕುರಕೆ ಹನಿ ನೀರೆರಚಿದರು. ಹನಿನೀರು ಉಕ್ಕಿನ ಕಾರ್ಖಾನೆಯನ್ನು ಎತ್ತಿ ಹಿಡಿಯುವಷ್ಟು ಶಕ್ತಿ ಪಡೆಯಲಾರದಾಯಿತು. ಎದೆ ತಟ್ಟಿ ಹೇಳಿಕೆಯನ್ನೀಯುತ್ತಿದ್ದ ಮಂತ್ರಿ ಮಹಾಶಯರುಗಳಿಗೂ, ಪೋರ್ಪಡೆಗಳಿಗೂ ಈ ವರ್ಷದ ಕೇಂದ್ರ ಬಜೆಟ್ ನೋಡಿ ಕೊಡ ನೀರು ಕುಡಿಯುವಂತಾಗಿರಬೇಕು. 1969-70 ರಲ್ಲಿ, ಈ ಯೋಜನೆಯ ಖರ್ಚು ರೂ. 1296 ಕೋಟಿ ಇತ್ತು. ಈಗದರ ಅಂದಾಜು ವೆಚ್ಚ ರೂ. 2300 ಕೋಟಿಯಂತೆ. ಈಗಿನ ಬಜೆಟ್ಟಿನಲ್ಲಿ ಒಂದು ಕೋಟಿ ರೂಪಾಯಿ ಒದಗಿಸಲಾಗಿದೆ. ಭೂಸ್ವಾಧೀನಕ್ಕೆ ತಜ್ಞರಿಗೆ ಒದಗಿಸಲು ಅಧಿಕಾರಿಯ ಜೀಪ್, ಪೆಟ್ರೋಲ್, ಭತ್ತೆಗಳಿಗಾಗಿಯೇ ಈ ಒಂದು ಕೋಟಿ. ವರ್ಷಕ್ಕೆ ಒಂದು ಕೋಟಿಯಂತೆ ಅಂದಾಜು ಖರ್ಚು ಬೆಳೆಯುತ್ತಿರುವಾಗ ವರ್ಷಕ್ಕೊಂದು ಕೋಟಿಯಂತೆ ಖರ್ಚಿಗೆ ಹಣ ಮೀಸಲಿಟ್ಟು ಅಧಿಕಾರಿ ಸಿಬ್ಬಂದಿ ಸಂಖ್ಯೆ ಬೆಳೆಯಬಹುದಲ್ಲದೆ ಅಡಿಗಲ್ಲು ಕೂಡ ನಾಪತ್ತೆಯಾಗಬಹುದಲ್ಲದೆ ಕಾರ್ಖಾನೆ ಕಾಣಲಾರದು. ವಿಜಯನಗರ ಉಕ್ಕಿನ ಕಾರ್ಖಾನೆ ನಿರುದ್ಯೋಗ ಸಮಸ್ಯೆ ಪರಿಹಾರಕ್ಕೆ, ಉಕ್ಕಿಗೆ ಸಂಬಂಧಪಟ್ಟ ಗುಡಿ ಕೈಗಾರಿಕೆಗಳ ಬೆಳವಣಿಗೆಗೆ ಕಾಮಧೇನು ಹಾಗೆಯೇ ಮಲ್ಪೆ, ಕಾರವಾರ-ಮಂಗಳೂರು ಬಂದರುಗಳ ಬೆಳವಣಿಗೆಗೆ, ಹುಬ್ಬಳ್ಳಿ-ಕಾರವಾರ ರೈಲ್ವೇ ಮಾರ್ಗಕ್ಕೆ ಅನುಕೂಲ. ಮೀಟರ್‌ಗೇಜ್ ರೈಲ್ವೇಯನ್ನು ಬ್ರಾಡ್‌ಗೇಜಾಗಿ ಪರಿವರ್ತನೆಗೆ ಪೂರಕ. ಉಕ್ಕು ಕಾರ್ಖಾನೆ ಗಮನ ಸೆಳೆಯದಿದ್ದಾಗ ಇದಕ್ಕೆ ಪೂರಕವಾದ ಇತರ ಅಭಿವೃದ್ಧಿ ಕೆಲಸಗಳನ್ನು ಕೇಳುವವರ್ಯಾರು?

(ಮುಂದುವರಿಯುವುದು)

ಪರಿಸರ

● "ಕೆಲಸ ಮಾಡಬಲ್ಲ ಸರಕಾರ ಆರಿಸಿ" ಎಂಬ ಘೋಷಣೆಯ ಉಬ್ಬರವನ್ನೇರಿ ಇಂದಿರಾ ಗಾಂಧಿ ಅವರು ಅಧಿಕಾರಕ್ಕೆ ಬಂದರು. ಮತ್ತೆ ಮುಂದಿನ ಚುನಾವಣೆ ಹೋರಾಟ ಪ್ರಾರಂಭವಾಗುತ್ತಿದ್ದಂತೆ ಅವರು ತಮ್ಮಲ್ಲಿ ಕೆಲಸ ಮಾಡಬಲ್ಲ ಇನ್ನೊಂದು ಘೋಷಣೆಯಾದರೂ ಇದೆಯೆಂಬುದನ್ನು ತೋರಿಸಿಕೊಡಬೇಕಾಗಿದೆ.

—ಸುಮಿತ್ ಮಿತ್ರಾ, ಪ್ರಭು ಚಾವ್ಲಾ 'ಇಂಡಿಯಾ ಟುಡೇ'ಯಲ್ಲಿ

● ಮೂರನೆ ದಿನ ಸಂಘರ್ಷ ಸಮಿತಿಯ (ಪ್ರತಿಭಟನೆ ಕಾರ್ಯಕ್ರಮದ) ಸುದ್ದಿಗಾಗಿ ಪ್ರಜಾವಾಣಿ ಪತ್ರಿಕೆಯ ಇಂಚಿಂಚೂ ಬಿಡದೆ ಹುಡುಕಿದೆ. ಎಲ್ಲೂ ಇಲ್ಲ. ಮನುಷ್ಯನೊಬ್ಬ ನರಿಯ ಹಿಂದೆ ಹೋಗುತ್ತಿದ್ದ ವಿಶ್ವಮಾನ್ಯ ಸುದ್ದಿ ಮೂರು ಕಾಲಂ ಫೋಟೋ ಮತ್ತು ವಿವರಣೆಯೊಂದಿಗೆ ರಾರಾಜಿಸುತ್ತಿತ್ತು.

—ವೀಕ್ಷಕ 'ಲಂಕೇಶ್ ಪತ್ರಿಕೆ'ಯಲ್ಲಿ

● ಅಮೇರಿಕದ ವಿದೇಶಿ ನೀತಿ ಕಾರ್ಯಾಚರಣೆಗೆ ತರಲು ವಿಶ್ವಬ್ಯಾಂಕ್ ಹಾಗೂ ಇತರ ಅಭಿವೃದ್ಧಿ ಬ್ಯಾಂಕ್‌ಗಳನ್ನು ಬಳಸಿಕೊಳ್ಳುವ ಅಮೇರಿಕದ ಪ್ರಯತ್ನದ ಬಗ್ಗೆ ವಿಶ್ವಬ್ಯಾಂಕ್ ಅಧ್ಯಕ್ಷ ಕ್ಲಾಸನ್ ಅತೃಪ್ತಿ ವ್ಯಕ್ತಪಡಿಸಿದ್ದಾರೆಂದು ವಾಷಿಂಗ್‌ಟನ್ ಪೋಸ್ಟ್ ವರದಿ ಮಾಡಿದೆ.

—ಇಂಡಿಯನ್ ಎಕ್ಸ್‌ಪ್ರೆಸ್, ಮಾ 9

ರಂಗಭೂಮಿಯ ಕುರಿತು ವಿಚಾರಗೋಷ್ಠಿ

ಫೆಬ್ರುವರಿ 25 ರಂದು ಹರಪನಹಳ್ಳಿಯಲ್ಲಿ ಬಳ್ಳಾರಿ ಜಿಲ್ಲಾ ಸಮುದಾಯ ನಾಟಕೋತ್ಸವದ ವರದಿ ಕುರಿತು ವಿಚಾರಗೋಷ್ಠಿ ನಡೆಯಿತು.

ರಂಗಭೂಮಿಯ ಸಾಧ್ಯತೆಗಳು ವಿಚಾರಗೋಷ್ಠಿಯಲ್ಲಿ ಜನಪದ ರಂಗಭೂಮಿಯ ಸಧ್ಯದ ಸಾಧ್ಯತೆಗಳು ಎನ್ನುವ ವಿಚಾರವಾಗಿ ಮಾತನಾಡಿದ ಡಾ|| ಬಸವರಾಜ ಮಲಶೆಟ್ಟರು ಜನಪದದಲ್ಲಿ ಬಂಡಾಯದ ಅಂಶ ಇಲ್ಲ ಎಂದರು. 'ಜನಪ್ರಿಯ ರಂಗಭೂಮಿಯ ಅಪಾಯ'ಗಳು ಬಗ್ಗೆ ಮಾತನಾಡಿದ ಶ್ರೀ ವೈ. ಭೀಮಸೇನಾಚಾರರು ಮಾತನಾಡುತ್ತಾ ಜನಪದ ಸಾಹಿತ್ಯದಲ್ಲಿ ಬಂಡಾಯ ಇಲ್ಲ; ಬರೀ ಮನರಂಜನೆ ಇದೆ ಎಂದು ಹೇಳುವುದು ಮಧ್ಯಮ ವರ್ಗ ಸ್ವಭಾವ ಎಂದರು. ಶ್ರೀ ಗುಡಿಹಳ್ಳಿ ನಾಗರಾಜ ಮಾತನಾಡುತ್ತಾ ಜನತೆಯ ಸಮೀಪಕ್ಕೆ ನಾಟಕದ ಸಂದೇಶವನ್ನು ಹೆಚ್ಚು ಕಲಾತ್ಮಕವಾಗಿ ತೆಗೆದುಕೊಂಡು ಹೋಗುವ ಸಾಧ್ಯತೆ ಮೂರನೆ ರಂಗಭೂಮಿಗಿದೆ ಎಂದರು.

ವಿಚಾರ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಶ್ರೀ ಎಂ. ಪಿ. ಪ್ರಕಾಶ್ ಮಾತನಾಡುತ್ತಾ ಜನಪದ ಧೋರಣೆಗಳನ್ನು ಬಿತ್ತರಿಸಲು ಬಯಲಾಟ, ಸಣ್ಣಾಟಗಳನ್ನು ಉಪಯೋಗಿಸಿಕೊಳ್ಳಬೇಕೆಂದರು.

ಸಮೂಹ ಮಾಧ್ಯಮಗಳ ಬಗ್ಗೆ ನಡೆದ ವಿಚಾರಗೋಷ್ಠಿಯಲ್ಲಿ ಪ್ರಬಂಧ ಮಂಡಿಸಿದ ಶ್ರೀ ಎ ಜಿ. ಶರಣಕುಮಾರ್, ಪ್ರಸ್ತುತ ಮಾಧ್ಯಮಗಳು ಜನವಿರೋಧಿಯಾಗಿವೆ ಎಂದರು. ಶ್ರೀ ಡಿ. ಉಲ್ಲಾಸ ಮಾತನಾಡುತ್ತಾ ನವ್ಯ ಅಲೆಯ ಹೆಸರಿನಲ್ಲಿ ಹಲವು ಚಿತ್ರಗಳು ಮಾರ್ಗ ತಪ್ಪಿಸುತ್ತವೆ ಎಂದರು. ಶ್ರೀ ಎಸ್. ಎಸ್. ಹಿರೇಮಠ ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾ, ಶೋಷಿತರ ಸಂಸ್ಕೃತಿ ಜನಪದ ಸಂಸ್ಕೃತಿ, ಶೋಷಕರ ಸಂಸ್ಕೃತಿ ಶಿಷ್ಟ ಸಂಸ್ಕೃತಿ ಎಂದರು.

ಈ ಸಂದರ್ಭದಲ್ಲಿ ಶ್ರೀ ಉಜ್ವಲ ರಾಮಪ್ಪ, ಬಸನಗೌಡ, ಅಂಬ್ವನ ಮುಂತಾದ ಜಾನಪದ ಕಲಾವಿದರಿಗೆ ಸನ್ಮಾನ ನಡೆಯಿತು.

ಕತ್ತಲೆ ರಾಜ್ಯ, ಬೆಲೆ ಏರಿಕೆ, ಮಾರೀಚನ ಬಂಧುಗಳು, ಕತ್ತಲೆ ದಾರಿ ದೂರ ಮೊದಲಾದ ನಾಟಕಗಳು ಪ್ರದರ್ಶಿತವಾದವು.

Printed & Published by P. Ramachandra Rao by him on behalf of the Communist Party of India Marxist) Karnataka State Committee, L-56 K. V. Temple Street Sultanpet, Bangalore-560 053 Editorial and managerial office :L-56, K. V. Temple Street ,Sultanpet, Bangalore 560 053. Phone-24154. Printed at Ravee Traders, No. 8/1, J. M Lane, Balepet Cross, Bangalore-560 053. EDITOR ; M. K. BHAT.